1. ನಿಯಮ 69ರ ಮೇರೆಗೆ

ಬೆಂಗಳೂರು ನಗರಕ್ಕೆ ಕುಡಿಯುವ ನೀರು ಪೂರೈಸುವ ಕಾವೇರಿ 4ನೇ ಹಂತ 2ನೇ ಘಟ್ಟದ ಯೋಜನೆಗೆ 1300ಕೋಟಿ ರೂಪಾಯಿಗಳ ಗುತ್ತಿಗೆಯನ್ನು ಬೈವಾಟರ್ ಸಂಸ್ಥೆಗೆ ನೀಡಿರುವ ಬಗ್ಗೆ ತೀರ್ಮಾನಿಸಿರುವುದರಿಂದ ಸಾರ್ವಜನಿಕರಿಗೆ ಹೆಚ್ಚಿನ ಹೊರೆಯಾಗುವ ಬಗ್ಗೆ.

+ **ಶ್ರೀ ಮಲ್ಲಿಕಾರ್ಜುನ ಖರ್ಗೆ** (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈಗ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ. ಉತ್ತರ ಕೊಡುವಾಗ ಅದರಲ್ಲಿ ಬೈವಾಟರ್ ವಿಷಯವನ್ನೂ ರೆಫರ್ ಮಾಡಬಹುದು. ಏಕೆಂದರೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವಾಗ ನಂಜೇಗೌಡರು ಅದರ ಬಗ್ಗೆ ಪ್ರಸ್ತಾಪಮಾಡಿದ್ದಾರೆ. ಇದನ್ನು ನಾವು ಚರ್ಚೆಗೆ ತೆಗೆದುಕೊಳ್ಳಬೇಕು ಎಂದು ನಾವು ಸುಮಾರು ಎಂಟು ದಿವಸಗಳಿಂದ ಪ್ರಯತ್ನ ಮಾಡುತ್ತಿದ್ದೇವೆ. ಒಂದಲ್ಲ ಒಂದು ಕಾರಣದಿಂದ ಇದು ಮುಂದೆ ಹೋಗುತ್ತಿದೆ. ಅದಕ್ಕಾಗಿ, ನನ್ನ ಮನವಿ ಏನೆಂದರೆ ಈ ಬೈವಾಟರ್ ಕಾಂಟ್ರಾಕ್ಟ್ ಬಗ್ಗೆ ನಾವು ಮೊದಲು ಚರ್ಚೆಯನ್ನು ತೆಗೆದುಕೊಳ್ಳೋಣ. ಅವರು ಇದಕ್ಕೆ ಉತ್ತರವನ್ನು ಕೊಡಲೇಬೇಕು. ಅವರು ಇದ್ದಾಗಲೇ ನಾವು ಇದನ್ನು ಚರ್ಚೆ ಮಾಡಬೇಕೆಂದು ಇದನ್ನು ಪೋಸ್ಟ್‌ಪೋನ್ ಮಾಡಿದ್ದು. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಅವರು ಉತ್ತರ ಕೊಟ್ಟಮೇಲೆ ಪುನಃ ನಾವು ಇದನ್ನು ಪ್ರಸ್ತಾಪ ಮಾಡಿದಾಗ ಅವರು ಇಲ್ಲಿ ಹಾಜರಿರುತ್ತಾರೋ, ಇಲ್ಲವೋ. ಆಗ ನಮಗೆ ಉತ್ತರವೂ ಸಮರ್ಪಕವಾಗಿ ಸಿಗುವುದಿಲ್ಲ ಮತ್ತು ಎರಡೆರಡು ಸಲ ಉತ್ತರವಾಗುತ್ತದೆ. ಅದಕ್ಕಾಗಿ, ನಾವು ಇದರ ಬಗ್ಗೆ ಮೊದಲು ಚರ್ಚೆ ಮಾಡೋಣ. ಆಮೇಲೆ ಅವರು ಇದನ್ನೂ ಸೇರಿಸಿ ಉತ್ತರ ಕೊಡಲಿ. ನನ್ನ ಸಲಹೆ ಏನೆಂದರೆ, ನಿಯಮ 69ರ ಕೆಳಗೆ ಚರ್ಚೆಗೆ ತೆಗೆದುಕೊಳ್ಳುತ್ತಿರತಕ್ಕಂಥ ಬೈವಾಟರ್ ಕಾಂಟ್ರಾಕ್ಟ್ ಬಗೆಗಿನ ವಿಷಯವನ್ನು ಮೊದಲು ಚರ್ಚೆ ಮಾಡೋಣ. ನೀವು ಈಗ ಹೇಗೂ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರ ಕೊಡುತ್ತೀರಿ. ಇದನ್ನು ಚರ್ಚೆ ಮಾಡಿದ ಮೇಲೆ ಎರಡನ್ನೂ ಸೇರಿಸಿ ಉತ್ತರ ಕೊಡಬಹುದು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ನೀವು ಉತ್ತರ ಕೊಟ್ಟಮೇಲೆ ಶೂನ್ಯವೇಳೆಯಾಗಿ, ನಂತರ ಬೈವಾಟರ್ ವಿಷಯವನ್ನು ತೆಗೆದುಕೊಂಡರೆ ಕೊನೆ ಘಳಿಗೆಯಲ್ಲಿ ಇದಕ್ಕೆ ಉತ್ತರ ಕೊಡುವುದು ಎಂದರೆ ಎರಡೆರಡು ಸಲ ಉತ್ತರ ಕೊಟ್ಟ ಹಾಗೆ ಆಗುತ್ತದೆ. ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಶ್ರೀಮಾನ್ ನಂಜೇಗೌಡರು ಇದನ್ನು ಮೆನ್‌ಷನ್ ಮಾಡಿದ್ದಕ್ಕಾಗಿ ನೀವು ಅದಕ್ಕೆ ಉತ್ತರವನ್ನು ಕೊಡುತ್ತೀರಿ. ಆಗ ಪುನಃ ಅದನ್ನು ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶವಿರುವುದಿಲ್ಲ. ಅದಕ್ಕಾಗಿ ನಾನು ಒಂದು ಸಲಹೆ ಮಾಡುತ್ತಿದ್ದೇನೆ. ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಲಿ, ಮಾನ್ಯ ಮುಖ್ಯಮಂತ್ರಿಗಳು ಎರಡೂ ಸೇರಿಸಿ ಒಟ್ಟಿಗೆ ಉತ್ತರ ಕೊಡಬಹುದು. ನಾವು ಚರ್ಚೆ ಮಾಡುವುದಕ್ಕೆ ಬಹಳ ಹೊತ್ತು ತೆಗೆದುಕೊಳ್ಳುವುದಿಲ್ಲ. ಅನಂತರ ನಿಮಗೆ ಹೇಗೆ ಅನುಕೂಲವಾಗುತ್ತದೋ ಹಾಗೆ ಮಾಡಿ.

ಅಧ್ಯಕ್ಷರು : ಮಾನ್ಯ ಖರ್ಗೆಯವರೆ, ಒಂದೊಂದು ಪಕ್ಷದಿಂದ ಒಬ್ಬೊಬ್ಬರು ಮಾತಾಡಲಿ, ದಯಮಾಡಿ ತಾವೂ ಕೂಡ ಮನವರಿಕೆ ಮಾಡಿಕೊಳ್ಳಬೇಕು. ನೀವು ಈಗ ಚರ್ಚೆ ಮಾಡುವ ವಿಷಯವನ್ನು ಸೇರಿಸಿ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡಬೇಕಾಗಿದೆ. ಇವತ್ತು ಸದನ ನಡೆಯುವಂಥದ್ದು ಕೊನೆಯ ದಿವಸ. ಬಹಳಷ್ಟು ಸದಸ್ಯರು ಬೇರೆ ಬೇರೆ ವಿಷಯಗಳನ್ನು ಚರ್ಚಿಸುವ ಸಲುವಾಗಿ ನೋಟೀಸುಗಳನ್ನು ಕೊಟ್ಟಿದ್ದಾರೆ. ಅವರೆಲ್ಲರಿಗೂ ಅವಕಾಶ ಕೊಡಬೇಕಾಗಿದೆ. ಆದ್ದರಿಂದ ದಯಮಾಡಿ ಒಂದೊಂದು ಪಾರ್ಟಿಯಿಂದ ಒಬ್ಬೊಬ್ಬರು ಸಂಕ್ಷಿಪ್ತವಾಗಿ ಮಾತನಾಡಿ. ಈಗ 10 ಗಂಟೆ 30 ನಿಮಿಷವಾಗಿದೆ. ನಾನೇನು ಹೇಳುತ್ತೇನೆಂದರೆ, ಮಾನ್ಯ ಮುಖ್ಯಮಂತ್ರಿಗಳು ಚರ್ಚೆಗೆ ಉತ್ತರ ಕೊಡತಕ್ಕಂಥ ಸನ್ನಿವೇಶದಲ್ಲಿ. We should also be in a position to help the press ಅವರಿಗೆ ಇನ್‌ಟೈಮ್ ಸಿಕ್ಕಿದರೆ they will be able to give justice to the Chief Minister's reply.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳು ಮಾತನಾಡಿದರೆ ಅದು ಎಲ್ಲಾ ಪತ್ರಿಕೆಗಳಲ್ಲಿ ಬಂದೇ ಬರುತ್ತದೆ. ಅದಕ್ಕೇನೂ ಅನುಮಾನ ಪಡಬೇಕಾಗಿಲ್ಲ. ಯಾವಾಗಲೂ ಅವರು ಏನು ಮಾತನಾಡಿದರೂ ಪತ್ರಿಕೆಗಳಲ್ಲಿ ಬರುತ್ತದೆ. ಆದ್ದರಿಂದ ಸದನದಲ್ಲಿ ಉತ್ತರ ಕೊಟ್ಟಿರುವುದು ಪತ್ರಿಕೆಗಳಲ್ಲಿ ಬರುವುದಿಲ್ಲವೇ? ಪ್ರೆಸ್‌ನವರೂ ಕೂಡ ಅವರ ಜೊತೆಯಲ್ಲಿಯೇ ಇರುತ್ತಾರೆ. ಅದಕ್ಕೇನೂ ತಾಪತ್ರಯ ಇಲ್ಲ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣಕ್ಕೆ ಉತ್ತರ ಕೊಟ್ಟಾದ ಮೇಲೆ ಈ ವಿಷಯವನ್ನು ತೆಗೆದುಕೊಳ್ಳಬಹುದು. ಬೈವಾಟರ್ ಮತ್ತು ಬೇರೆ ಬೇರೆ ವಿಷಯಗಳು ಸಾಕಷ್ಟು ಇದ್ದು ಅದರ ಬಗ್ಗೆ ಹೆಚ್ಚು ವೇಳೆ ಚರ್ಚೆ ಮಾಡಬಹುದು. ಆದ್ದರಿಂದ ಮೊದಲು ಸಿ. ಎಂ. ರಿಪ್ಲೈ ಆಗಿಬಿಟ್ಟರೆ ಎಲ್ಲಾ ಸಬ್ಜೆಕ್ಟ್‌ಗಳನ್ನು ತೆಗೆದುಕೊಳ್ಳಬಹುದು.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಇದನ್ನು ಅವರು ಸೇರಿಸಿ ಉತ್ತರ ಕೊಡಲಿ ಎಂದು ಹೇಳಿಬಿಟ್ಟಿದ್ದಾರೆ. ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ಕೂಡ ಸುಲಭವಾಗುತ್ತದೆ ಮತ್ತು ಟೈಮ್ ಸೇವ್ ಆಗುತ್ತದೆ. ಆದ್ದರಿಂದ ನಿಯಮ 69ರ ಮೇಲಿನ ಚರ್ಚೆಯಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು, ನಂತರ ಶ್ರೀ ಎಸ್. ಸುರೇಶ್ ಕುಮಾರ್ ಅವರು ಮತ್ತು ಶ್ರೀ ನಂಜೇಗೌಡರು ಮಾತನಾಡುತ್ತಾರೆ. ಅತೀ ಹೆಚ್ಚು ಎಂದರೆ 11-30 ಗಂಟೆಗೆ ಡಿಸ್‌ಕಷನ್ ಕಂಪ್ಲೀಟ್ ಆಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯಅಧ್ಯಕ್ಷರೆ, ನಾವು ಹೇಳುವುದನ್ನು ಹೇಳುತ್ತೇವೆ, ಡೆಮಾಕ್ರಸಿಯಲ್ಲಿ we have got our own way. They have got their own way ಹಾಗೆ ನಾವು ಕೊನೆಯ ಪಕ್ಷ ಏನು ವಾಸ್ತವಾಂಶ ಇದೆ ಅದನ್ನು ಸದನದ ಗಮನಕ್ಕೆ ಮುಖ್ಯಮಂತ್ರಿಗಳ ಗಮನಕ್ಕೆ ತರತಕ್ಕಂಥದ್ದು ಸಾರ್ವಜನಿಕರ ಹಿತದೃಷ್ಟಿಯಿಂದ ನಮ್ಮ ಕರ್ತವ್ಯವಾಗಿರುತ್ತದೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ನಮಗೂ ಕೂಡ ಅದನ್ನು ಮೆನ್‌ಷನ್ ಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಎಲ್ಲ ವಿಷಯಗಳನ್ನೂ ಸಿ. ಎಂ. ಅವರ ರಿಪ್ಲೈ ಆದ ಮೇಲೆ ತೆಗೆದುಕೊಳ್ಳೋಣ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈಗಾಗಲೇ "Implementation of Cauvery Water Supply Scheme Phase - IV, Stage-2 through private sector participation on BOOT basis." ಈ ಒಂದು ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬೇಕೆಂದು ನಾವು ಪ್ರಸ್ತಾಪ ಮಾಡಿದ್ದೆವು. ಆದರೆ, ಇದರ ಮಧ್ಯೆ ಮಾನ್ಯ ನಂಜೇಗೌಡರೂ ಕೂಡ ಹಿಂದೆ ಸಂಕ್ಷಿಪ್ತವಾಗಿ ಇಲ್ಲಿ ಪ್ರಸ್ತಾಪ ಮಾಡಿದರು. ಅದಕ್ಕೆ ಶ್ರೀಮಾನ್ ಸೋಮಣ್ಣನವರು ಉತ್ತರ ಕೊಡತಕ್ಕಂಥ ಪ್ರಯತ್ನವನ್ನು ಮಧ್ಯದಲ್ಲಿ ಮಾಡಿದ್ದರು. ಆದರೆ ಕೊನೆಗೆ ಅದು ಅಲ್ಲಿಗೇ ಉಳಿಯಿತು. ಗವರ್ನರ್ ರಿಪ್ಲೈನಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅದನ್ನು ಹೇಳುತ್ತಾರೆ ಎನ್ನುವ ನಿರೀಕ್ಷೆ ಇಟ್ಟುಕೊಂಡೇ ಪುನಃ ಅದನ್ನು ಇಲ್ಲಿ ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ಅದೇ ರೀತಿ ಇಲ್ಲಿ ಶ್ರೀ ಸುರೇಶ್‌ಕುಮಾರ್ ಅವರು ಪ್ರಸ್ತಾಪ ಮಾಡಿದ್ದರು. ಅದಕ್ಕೂ ಕೂಡ ಮಾನ್ಯ ಉಪ ಮುಖ್ಯಮಂತ್ರಿಗಳಿಂದ ಉತ್ತರ ಬರಲಿಲ್ಲ ಎಂದು ಅವರು ಹೇಳುತ್ತಿದ್ದಾರೆ. ಹೀಗೆ ಇದಕ್ಕೆ ಒಂದು ಸಮರ್ಪಕವಾದಂಥ ಉತ್ತರ ಇಲ್ಲದ ಕಾರಣ ಮತ್ತು ಸಾಕಷ್ಟು ವ್ಯತ್ಯಾಸ, ಕಾಂಟ್ರಡಿಕ್ಷನ್, ಸಸ್‌ಪಿಷನ್ ಇದರಲ್ಲಿ ಕಾಣುತ್ತಿದೆ. ಏಕೆಂದರೆ ಬ್ರೈವಾಟರ್ ಸಂಸ್ಥೆಗೆ ಈ ಒಂದು ಯೋಜನೆಯನ್ನು ವಹಿಸಿಕೊಡಬೇಕೆಂದು ಮೊದಲೇ ಸಿದ್ಧತೆಗಳನ್ನು ಮಾಡಿ ಅದಕ್ಕನುಗುಣವಾಗಿ ದಿನಾಂಕ 13-3-1997, 27-3-1997 ಮತ್ತು 21-5-1997 ರಂದು ಹೀಗೆ ಈ ಮೂರು ಪತ್ರಗಳನ್ನು ಬರೆದು ಗ್ಲೋಬಲ್ ಟೆಂಡರ್ ಕಾಲ್‌ಫರ್ ಮಾಡುವುದಕ್ಕೆ ಮುಂಚೆಯೇ ಅವರಿಗೆ ಕೊಡತಕ್ಕಂಥ ತಯಾರಿ ನಡೆದಿದೆ. ಇಂಥ ಒಂದು ದೊಡ್ಡ ಕೆಲಸವನ್ನು ಗ್ಲೋಬಲ್ ಟೆಂಡರ್ ಮುಖಾಂತರ ಸರ್ಕಾರ ಮಾಡುತ್ತದೆಂದು ಹೇಳಿಕೊಂಡು ಬಂದ ನಂತರ ಯಾವುದೋ ಒಂದು ಕಂಪನಿಗೆ ಈ ಕೆಲಸವನ್ನು ಕೊಡಬೇಕೆಂದು ಮೊದಲೇ ಪೂರ್ವ ಸಿದ್ಧತೆಯನ್ನು ತಯಾರು ಮಾಡಿ ಆ ನಂತರ ಉಳಿದುದ್ದನ್ನು ನಾಟಕೀಯ ರೀತಿಯಲ್ಲಿ ಅಂದರೆ ಟೆಂಡರ್ ಕಾಲ್‌ಫರ್ ಮಾಡಿದ್ದೇವೆ ಅದರೊಳಗೆ ಏನಿದೆ, ಆ ರೀತಿ ಕೊಡುತ್ತೇವೆ ಎನ್ನುವಂಥ ರೀತಿಯಲ್ಲಿ ಹೇಳುವುದನ್ನು ನೋಡಿದಾಗ, ಈ ಸ್ಥಿತಿಗೆ ಸದರಿ ಕೆಲಸ ಏಕೆ ಬಂತು ಎಂಬ ಅನುಮಾನ ಉಂಟಾಗಿದೆ. ಸುಮಾರು 500 ಎಂ. ಎಲ್.ಡಿ. ನೀರನ್ನು Build, own operate and Transfer ಯೋಜನೆ ಕೆಳಗೆ ಖಾಸಗಿ ಕಂಪನಿಯವರಿಗೆ ವಹಿಸಿಕೊಡಬೇಕು ಎನ್ನುವಂಥ ನಿರ್ಣಯ ಈಗಾಗಲೇ ಸರ್ಕಾರದಿಂದ ತೆಗೆದುಕೊಳ್ಳಲಾಗಿದೆ ಎನ್ನುವುದು ನಮಗೆ ಗೊತ್ತಾಗಿದೆ. ಆದರೆ, ಇದರ ಕೆಲಸವನ್ನು ನಾವು ಯಾರಿಗೂ ಕೊಟ್ಟಿಲ್ಲ. ಇದರ ನಿರ್ಣಯವನ್ನು ಇನ್ನೂ ಮಾಡಿಲ್ಲ ಎನ್ನುವಂಥ ಹೇಳಿಕೆಗಳನ್ನು ಪತ್ರಿಕೆಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿದ್ದಾರೆ. ಮೊನ್ನೆ ಮಾನ್ಯ ನಂಜೇಗೌಡರು ಮಾತನಾಡುತ್ತಾ ಈಗಾಗಲೇ ಕಾವೇರಿ 4ನೇ ಹಂತ, 1ನೇ ಘಟ್ಟದ ಕೆಲಸ ನಮ್ಮ ಜಪಾನ್ ನೆರವಿನಿಂದ ಏನು ನಡೆದಿದೆ ಅದನ್ನೇ ಇನ್ನೂ ಪೂರೈಸಿಲ್ಲ. ಇದರ ಮಧ್ಯೆ 4ನೇ ಹಂತ 2ನೇ ಘಟ್ಟದ ಕೆಲಸವನ್ನು ಸುಮಾರು 1500 ಕೋಟಿ ರೂಪಾಯಿಗಳ ಯೋಜನೆಯನ್ನು ತೆಗೆದುಕೊಳ್ಳಲು ಮಲೇಶಿಯನ್ ಕಂಪನಿ ಜೊತೆಯಲ್ಲಿ ಸಂಧಾನ ನಡೆಸಿ ಸಾಲದ ಹೆಚ್ಚಿನ ಹೊರೆ ಮಾಡತಕ್ಕಂಥ ಪ್ರಯತ್ನ ಕೂಡ ಸರ್ಕಾರದಿಂದ ನಡೆದಿದೆ. ಆ ಮಲೇಶಿಯನ್ ಕಂಪನಿಯವರಿಗೆ ಇಂತಹ ದೊಡ್ಡ ಕೆಲಸಗಳನ್ನು ಮಾಡಿಸಿದ

ಯಾವ ಅನುಭವ ಇಲ್ಲಿಯವರೆಗೆ ಇಲ್ಲ ಎನ್ನುವಂಥದ್ದು ಕೂಡ ಅನೇಕ ಕಾಗದ ಪತ್ರಗಳಿಂದ ಹಾಗೂ ಪತ್ರ ವ್ಯವಹಾರದಿಂದ ಗೊತ್ತಾಗುತ್ತದೆ. ಇನ್ನೊಂದು ವಿಶೇಷವಾಗಿ ಅವರೇ ಒಂದು ' ಟಾಟಾ ಕನ್ಸಲ್ಟೆನ್ಸಿ ಕಂಪನಿಗೆ ' ಎಂತಹ ಕಂಪನಿಗೆ ನಾವು ಈ ಕಾಂಟ್ರಾಕ್ಟ್‌ನ್ನು ಕೊಡಬೇಕು ಮತ್ತು ಅದಕ್ಕೆ ಏನು ಅಳತೆಗೋಲು ಇರಬೇಕು ಎನ್ನುವುದರ ಬಗ್ಗೆ ತಿಳಿದುಕೊಳ್ಳಲು ರೆಫರ್ ಮಾಡಿದ್ದರು. ಅವರೇ ಒಂದು ಸಾವಿರ ಅಂಕಿ (ಥೌಸಂಡ್ ಪಾಯಿಂಟ್ಸ್) ಫಿಕ್ಸ್ ಮಾಡಿ, ಟೆಂಡರ್ ಕಾಲ್‌ಫರ್ ಮಾಡಿದಾಗ ಟೆಂಡರ್ ಫಾರಂನ್ನು ತೆಗೆದುಕೊಂಡಂಥವರು ಸುಮಾರು 9 ಜನ ಇದ್ದರೆ ಅದರಲ್ಲಿ ಕೊನೆಗೆ ರೆಸ್‌ಪಾನ್ಸ್ ತೋರಿಸಿದವರು ಕೇವಲ 3 ಜನ ಮಾತ್ರ ಎನ್ನತಕ್ಕಂಥದ್ದು ಗಮನಾರ್ಹವಾದ ವಿಚಾರ. ಬೈವಾಟರ್, ಜಿ. ವಿ.ಕೆ. ಮತ್ತು ಬೋವಿಸ್ ಈ ಮೂರು ಕಂಪನಿಗಳು ಫೈನಲ್ ಟೆಂಡರನ್ನು ಸಬ್‌ಮಿಟ್ ಮಾಡಿ ಅದರಲ್ಲಿ ಯಾವ ಯಾವ ಕಂಡೀಶನ್ ಇರಬೇಕೆಂದು ಇವರು ಹೇಳಿದ್ದರು ಅದರ ಪ್ರಕಾರ ಫುಲ್‌ಫಿಲ್ ಮಾಡಿ ಟೆಂಡರನ್ನು ತುಂಬಿದ್ದರು. ಆದರೆ ಸಾವಿರ ಪಾಯಿಂಟ್ಸ್‌ನ್ನು ಟಾಟಾ ಕನ್ಸಲ್ಟಿಂಗ್ ಇಂಜಿನಿಯರ್ಸ್‌ಗೆ ಕೊಡುವ ಪ್ರಪೋಸಲ್ ಮೊದಲೇನಿತ್ತು, ಅದನ್ನು ಬದಲಾವಣೆ ಮಾಡಿ ಸುಮಾರು 650 ಪಾಯಿಂಟ್ಸ್‌ನ್ನು ಟಾಟಾ ಕನ್ಸಲ್‌ಟೆನ್ಸಿಯವರು ಕೊಡುವುದು ಉಳಿದದ್ದನ್ನು ಇಂಟರ್ನಲ್ ಅಂದರೆ ಕೇವಲ ಬಿಡಬ್ಲ್ಯುಎಸ್‌ಎಸ್‌ಬಿಯವರು ಮಾತ್ರ ಪಾಯಿಂಟ್ಸ್‌ನ್ನು ಅಲಾಟ್ ಮಾಡುವುದೆನ್ನುವ ನಿರ್ಣಯ ತೆಗೆದುಕೊಳ್ಳಲಾಗಿದ್ದು, ಆ ನಿರ್ಣಯ ತೆಗೆದುಕೊಳ್ಳುವ ಮೊದಲು ಇಲ್ಲೇ ಪ್ರಶ್ನೆ ಬರುವುದು, ಮೊದಲೇ ಎಕ್ಸ್‌ಪರ್ಟ್ಸ್ ಕಮಿಟಿ ಏನಿದೆ, ಟಾಟಾ ಕನ್ಸಲ್‌ಟೆನ್ಸಿ ಇಂಜಿನಿಯರ್ಸ್ ಇರಬಹುದು, UK based W.S. Hatkins ಇವರಿಗೆ ಇವಾಲ್ಯುಯೇಷನ್ ಮಾಡುವ ಕೆಲಸವನ್ನು ಒಪ್ಪಿಸಿದಾಗ, ಇದು ಈ ರೀತಿ ಏಕಾಯಿತೆಂಬುದು ನನಗರ್ಥವಾಗುತ್ತಿಲ್ಲ. ನಂ. ಯುಡಿಡಿ ಎ ಎಂ. ಎನ್ ವಿ 97 ಇದು ಅವರದ್ದೇ ಕ್ಯಾಬಿನೆಟ್ ನೋಟ್ ಈ ಕ್ಯಾಬಿನೆಟ್ ನೋಟ್‌ನಲ್ಲಿ ಅಂದಿನ ಅರ್ಬನ್ ಡೆವಲಪ್‌ಮೆಂಟ್ ಪ್ರಿನ್ಸಿಪಾಲ್ ಸೆಕ್ರೆಟರಿಗಳಾದ ಶ್ರೀಮಾನ್ ಥಾಮಸ್‌ರವರು ಅವರು ತಮ್ಮ ಸ್ಪಷ್ಟ ಅಭಿಪ್ರಾಯ ಕೊಟ್ಟಿದ್ದಾರೆ. ಚೀಫ್ ಸೆಕ್ರೆಟರಿಯವರು ಇದರ ಅಧ್ಯಕ್ಷರಾಗಿದ್ದು, ಪ್ರಿನ್ಸಿಪಾಲ್ ಸೆಕ್ರೆಟರಿ ಫೈನಾನ್ಸ್ ಅವರೂ ಕೂಡ ಸದಸ್ಯರು. ಛೇರ್ಮನ್, ಬಿಡಬ್ಲ್ಯುಎಸ್‌ಎಸ್‌ಬಿ. ಪ್ರಿನ್ಸಿಪಾಲ್ ಸೆಕ್ರೆಟರಿ ಅರ್ಬನ್ ಡೆವಲೆಂಪ್‌ಮೆಂಟ್, ಡಿಪಾರ್ಟ್‌ಮೆಂಟ್ ಆಫ್ ಲೆಜಿಸ್ಲೇಷನ್ ಅಂಡ್ ಪಾರ್ಲಿಮೆಂಟರಿ ಅಫೇರ್ಸ್, ಇಷ್ಟು ಜನ ಸದಸ್ಯರು ದಿ : 8-12-98 ರಂದು ಸಭೆ ಸೇರಿ ಸ್ಪಷ್ಟವಾಗಿ ಕೆಲವು ಸಂಶಯಗಳು ನಮಗೆ ಈ ರೀತಿಯಾಗಿ ಕಾಣುತ್ತಿವೆ. ಆದ್ದರಿಂದ ಈ ಪ್ರಾಜೆಕ್ಟ್ ತೆಗೆದುಕೊಳ್ಳುವುದು ಸರಿಯಲ್ಲ ಎನ್ನುವಷ್ಟರಮಟ್ಟಿಗೆ ಇದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಅದನ್ನು ನಾನು ನಮ್ಮ ಗಮನಕ್ಕೆ ತರುತ್ತೇನೆ.

" The project size is around Rs. 1,500 crores. At the rough rate indicated by the bidders the cost of water to the BWSSB will be upward of Rs. 400 crores per annum." ಅಂದರೆ 1,500 ಕೋಟಿ ರೂಪಾಯಿಗಳನ್ನು ಖರ್ಚುಮಾಡಿ, ನಾವು ಇವತ್ತಿನ ದಿವಸ ಪ್ರಾಜೆಕ್ಟ್‌ನ್ನು ತೆಗೆದುಕೊಳ್ಳುತ್ತಿದ್ದೇವೆ, ಅದಕ್ಕೆ ಬಿಡಬ್ಲ್ಯುಎಸ್‌ಎಸ್‌ಬಿಯವರು 400 ಕೋಟಿ ರೂಪಾಯಿಗಳನ್ನು ಪ್ರತಿವರ್ಷ ತುಂಬುವ ಪ್ರಮೇಯ ಬರುತ್ತದೆ ಎನ್ನುವ ಮಾತನ್ನು ಇದರಲ್ಲಿ ಹೇಳಿದ್ದಾರೆ. " Bangalore Water Supply & Sewerage Board has evalu-

ated the offers received in part with the assistance of consultants and in part by itself. The evaluation of technical proposal quality which carried 150 points and operation and maintenance proposal which carries 50 points, out of the total of 1,000 points was done by Tata Consulting Engineers. The evaluation of financial offer 200 points and commercial bid 250 points carrying a combined total of 450 points was done by Tata Consultancy Services in association with W.S. Hatkins of U.K. the evaluation of BOOT experience 250 points and operation and maintenance experience 100 points, making a total of 350 points was done in house of B.W.S.S.B." ಬಿಡಬ್ಲ್ಯೂಎಸ್‌ಎಸ್‌ಬಿಯವರು 350 ಪಾಯಿಂಟ್ಸ್‌ನ್ನು ಅಲಾಟ್ ಮಾಡಿದ್ದಾರೆ. ಈಗ ಅವರ ಅಭಿಪ್ರಾಯವಿರುವ ಇನ್ನೊಂದು ಪ್ಯಾರಾ ಓದುತ್ತೇನೆ.

" It was obeserved that the three parties who have offered bids for the projects had received marks which were comparable to one another in respect of the technical, financial and commercial bids in respect of BOOT experience. However, there was wide variation in the points awarded. Under this evaluation, some of the bidders had been awarded the full marks such as 62 or 100 for certain criteria while certain other received nearly zero marks for these criteria. It was not clear whether the criteria of selecting sub-parameters, valuations, etc., was the most objective possible or whether some better or more rational system of evaluation could be adopted. For example, a firm which was awarded a very mark for treatment plant, was awarded nearly nearly zero for pumping plant. One firm which got the lowest point for capacity of water supply and waste water treatment plant constructed got disproportionately high marks in the comparison with other two bidders for total length of pipelines. Prima facie, there should be some co-relation between the experience in different companies such as treatment plant, pumping station, pipeline, and investment. However, such was not what has emerged in the case of BOOT experience, further the experience that is relevant to the experience relating to the work of a similar nature to the project under proposal namely experience in bulk supply for water, pumping stations of comparable size, pipelines of comparable dimensions, treatment plant of a similiar size,

etc. It was not clear whether this has been made the yardstick for the evaluation of BOOT experience as the bidder has not been specific instructions in this regard. If necessary the bidders can be requested to provide the further information." ಇದರಲ್ಲಿ ಒಂದು ಕಂಪನಿಗೆ ಒಂದು ಐಟಂನಲ್ಲಿ ಝೀರೋ ಮಾರ್ಕ್ಸ್ ಕೊಟ್ಟರೆ, ಇನ್ನೊಬ್ಬರಿಗೆ ಹೆಚ್ಚಿನ ಮಾರ್ಕ್ಸ್ ಅಂದರೆ 66 ರಿಂದ ನೂರಕ್ಕೆ ನೂರು ಮಾರ್ಕ್ಸ್ ಕೊಡುವುದು ; ಈ ರೀತಿಯಾಗಿ, ಬಿಡ್ಡರ್ ಟೆಂಡರ್ ಪ್ರಕಾರ, ಒಂದು ಕಂಪನಿಗೆ ಯಾವ ಎಕ್ಸ್‌ಪೀರಿಯನ್ಸ್ ಇರಬೇಕಾಗುತ್ತದೆಂದು ನಮ್ಮ ಅಪೇಕ್ಷೆ ಇರುತ್ತದೆಯೋ, ಅದರಲ್ಲಿಯೂ ಕೂಡ ವ್ಯತ್ಯಾಸ ಕಾಣುತ್ತಿದೆ. ಅದಕ್ಕಾಗಿ ಇದನ್ನು ನಾವು ಪೋಸ್ಟ್‌ಪೋನ್ ಮಾಡಿ, ರಿಕ್ವೆಸ್ಟ್ ಮಾಡಿಕೊಳ್ಳಬೇಕು ಮತ್ತು ಇದರ ಬಗ್ಗೆ ಕ್ಲಾರಿಫಿಕೇಷನ್ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಅವರ ಇಲಾಖೆಯ ಸೆಕ್ರೆಟರಿ ಥಾಮಸ್‌ರವರೇ ಹೇಳಿದ್ದಾರೆ. ಮುಂದೆ, ಅವರು ಇದನ್ನೂ ಹೇಳಿದ್ದಾರೆ.

"The preparedness of opinion in the meeting, therefore, was that the evaluation of BOOT, experience and O.M. (Operation & Maintenance) experience should also be got done through the Tata Consultancy Service with focus of the experience that i.e., report. The Committee under the Chairmanship of the Chief Secretary as provided in the Government Order on infrastructure policy and consisting of the following namely Chief Secretary..." ಅಂದರೆ ಇದರಲ್ಲಿ ಓಪನ್‌ಲಿ, ಈ ಒಂದು ಯೋಜನೆ ಕೆಳಗೆ ನಾವು ಏನು ಸಾವಿರ ಪಾಯಿಂಟ್ಸ್‌ನ್ನು ಕೊಟ್ಟಿದ್ದೇವೆ, ಅದು ಟಾಟಾ ಕನ್ಸಲ್ಟೆನ್ಸಿಗೆ ಬೈಫರ್‌ಕೇಟ್ ಮಾಡಿ ಕೇವಲ 650 ಅಂಕಿಗೆ ನಿಮ್ಮ ಒಪೀನಿಯನ್ ಸೀಮಿತವಾಗಿರಬೇಕು, 350 ಅಂಕಿಯನ್ನು ನಾವೇ ಅದಕ್ಕೆ ಆಪರೇಷನ್ ಅಂಡ್ ಮೈನ್‌ಟೆನೆನ್ಸ್ ಬೇರೆ ಏನಿದೆ ಅದರ ಬಗ್ಗೆ ಬಿಡಬ್ಲ್ಯುಎಸ್‌ಎಸ್‌ಬಿಯವರು ಮಾತ್ರ ನಿರ್ಣಯ ತೆಗೆದುಕೊಳ್ಳುತ್ತಾರೆ ಹಾಗೂ ಅವರು ಮಾರ್ಕ್ಸ್‌ನ್ನು ಅಲಾಟ್ ಮಾಡುತ್ತಾರೆಂದು ಹೇಳಿದ್ದಾರೆ. ಈ ಮಾತು ಸರಿಯಲ್ಲ 350 ಮಾರ್ಕ್ಸ್‌ನ್ನೂ ಕೂಡ ನೀವು ಟಾಟಾ ಕನ್ಸ್‌ಲ್‌ಟೆನ್ಸಿಯವರಿಗೆ ಕೊಟ್ಟರೆ ಚೆನ್ನಾಗಿತ್ತು ಏಕೆಂದರೆ ಅವರು ಎಕ್ಸ್‌ಪರ್ಟ್ಸ್ ಇದ್ದು ಇದರ ಬಗ್ಗೆ ಮಾಹಿತಿ ಇರುವವರು ಎಂದೂ ಸಹ ಇವರು ಹೇಳಿದ್ದಾರೆ. ಏನು ಟಾಟಾ ಕನ್ಸ್‌ಲ್‌ಟೆನ್ಸಿ ಕಂಪನಿ ಪ್ರಕಾರ ಬೈ -ವಾಟರ್ ನವರು ಕಡಿಮೆ ಮಾರ್ಕ್ಸ್ ತೆಗೆದುಕೊಂಡಿದ್ದರು ಅವರಿಗೆ ಇಲ್ಲಿ ಹೆಚ್ಚಿನ ಮಾರ್ಕ್ಸ್ ಮತ್ತು ಪಾಯಿಂಟ್ಸ್‌ನ್ನು ಕೊಟ್ಟು ಅವರನ್ನು ಸಿದ್ದ ಮಾಡಿದವರು ಬಿಡಬ್ಲ್ಯು ಎಸ್‌ಎಸ್‌ಬಿಯವರೇ ಹೊರತು ಎಕ್ಸ್‌ಪರ್ಟ್ ಕಮಿಟಿಯಲ್ಲ.

10.50 ಎ. ಎಂ.

ಟೆಂಡರನ್ನು ಕಾಲ್‌ಫರ್ ಮಾಡುವಾಗ ಸಾವಿರ ಪಾಯಿಂಟ್ಸ್‌ನ್ನು ಫಿಕ್ಸ್ ಮಾಡಿದ್ದಿರಿ. ಅದರ ಅಂತರದಲ್ಲಿ ಯಾರಿಗೆ ಮಾರ್ಕ್ಸ್ ಅಥವಾ ಪಾಯಿಂಟ್ಸ್ ಕೊಡುತ್ತೀರಿ ಅವರಿಗೆ ಟೆಂಡರನ್ನು ಅಲಾಟ್ ಮಾಡುತ್ತೇವೆ ಎನ್ನುವ ಒಂದು ಅನಿಸಿಕೆ ಇದ್ದರೂ ಇದನ್ನು ಬೈಫರ್‌ಕೇಟ್ ಮಾಡುವ ಅವಶ್ಯಕತೆ ಏನಿತ್ತು? ಈ ಬೈಫರ್‌ಕೇಟ್ ಮಾಡಿ ನಿಮಗೆ ಬೇಕಾದಂಥ ಕಂಪನಿಗಳಿಗೆ ಅಂದರೆ ಟೆಂಡರ್ ಕಾಲ್‌ಫರ್

ಮಾಡುವುದಕ್ಕಿಂತ ಮುಂಚಿತವಾಗಿಯೇ ಇಂಥ ಕಂಪನಿಗೆ BOOT ಯೋಜನೆಯ ಕೆಳಗಡೆ ಕೊಡುತ್ತೇವೆಂದು ಇಂಗಿತವನ್ನು ತೋರಿಸಿದಿರಿ ಇದರ ಆಧಾರದ ಮೇಲೆ 350 ಮಾರ್ಕ್ಸ್ ಅವರು ಇಟ್ಟುಕೊಂಡು ಕನ್‌ಸಲ್‌ಟೆನ್ಸಿಯಲ್ಲಿ ಏನು ಕಡಿಮೆ ಬಂದಿತ್ತು ಅದನ್ನು ಸರಿಪಡಿಸತಕ್ಕಂಥ ಕೆಲಸ ಇಲ್ಲಿನ ಅಧ್ಯಕ್ಷರು ಮತ್ತು ಬೋರ್ಡ್‌ನಲ್ಲಿರತಕ್ಕಂಥ ಸಮಿತಿಯ ಸದಸ್ಯರು ಮಾಡಿದ್ದಾರೆ. ಇವರು ಈ ಕೆಲಸವನ್ನು ಮಾಡಬೇಕಾದರೆ ಯಾರ ಹೇಳಿಕೆಯ ಆಧಾರದ ಮೇಲೆ ಮಾಡಬೇಕು ? ಸರ್ಕಾರದ ಮಧ್ಯಸ್ಥಿತಿಕೆಯಿಂದ ಆಗಬೇಕು ಇಲ್ಲವಾದರೆ ಸಾವಿರ ಪಾಯಿಂಟ್ಸ್ ಇದ್ದುದ್ದನ್ನು ಅವರು ತೆಗೆದುಕೊಂಡು ಹೇಗೆ ಅಲಾಟ್ ಮಾಡಿದರು? Unless you have got certain motive, ಇಲ್ಲದಿದ್ದರೆ ಮಾಡುವುದಕ್ಕೆ ಸಾಧ್ಯವಿರಲಿಲ್ಲ. ರೂಲ್ಸ್ ಪ್ರಕಾರ ಟೆಂಡರ್ ಏನಾಗುತ್ತದೆಯೋ ಹಾಗೆಯೇ ಆಗಲಿ ಎಂದು ಇರಬೇಕಾಗಿತ್ತು. ಆದರೆ ನೀವು ಇದನ್ನು ಬೈಫರ್‌ಕೇಟ್ ಮಾಡಿ ತಮಗೆ ಬೇಕಾದವರಿಗೆ ಮಾರ್ಕ್ಸ್‌ನ್ನು ಕೊಡತಕ್ಕಂಥದ್ದು ಸರಿಯಿಲ್ಲ ಎನ್ನತಕ್ಕಂಥ ಮಾತನ್ನು ಕಾರ್ಯದರ್ಶಿಗಳು ನಿಮ್ಮ ಸಚಿವಸಂಪುಟದ ನೋಟ್‌ನಲ್ಲಿ ಹೇಳಿದ್ದಾರೆ. ಇದಲ್ಲದೆ ಮತ್ತೊಂದು ಮಾತನ್ನು ಹೇಳುತ್ತಾರೆ ; ಅದೇನೆಂದರೆ

" This the following namely, will review the evaluation and recommend the course of action regarding assigning the project to the most suitable bidder. It was agreed that for this, a time of two months would be required." ಇದಕ್ಕೆ ಎರಡು ತಿಂಗಳು ಸಮಯ ಬೇಕು ಎಂದು ಕೇಳಿಕೊಂಡ ನಂತರ, ಇವರಿಗೆ ಸ್ವಲ್ಪ ತರಾತುರಿ ಇತ್ತು. ಏಕೆಂದರೆ ಇವರು ಈಗಾಗಲೇ ಯಾರಿಗೆ ಮಾತು ಕೊಟ್ಟಿದ್ದರೋ ಆ ಮಾತಿನ ಪ್ರಕಾರ ನಡೆದುಕೊಂಡು ಹೋಗಬೇಕಾಗಿತ್ತು. ಇದಕ್ಕಾಗಿ ಇವರು ಇದನ್ನು ಓವರ್‌ರೂಲ್ ಮಾಡುವುದಕ್ಕೆ ಅಂದಿನ ಮಂತ್ರಿಗಳಾದ ಮಾನ್ಯ ಅನಂತ್‌ನಾಗ್‌ರವರು ದೊಡ್ಡ ನೋಟ್ ಬರೆದರು. ಏಕೆ ಬರೆದರು ಎಂದರೆ ಕಾರ್ಯದರ್ಶಿಗಳೇನು ಅಬ್ಜಕ್ಷನ್ ಮಾಡಿ ಕ್ಯಾಬಿನೆಟ್‌ಗೆ ಒಂದು ನೋಟ್ ಕಳುಹಿಸಿದ್ದರು, ಈ ನೋಟಿಗೆ ಉತ್ತರವಾಗಿ ಈ ನೋಟ್‌ನಲ್ಲಿರತಕ್ಕಂಥ ಮಾತಿಗೆ ಅರ್ಥವಿಲ್ಲ ಇದು ಸರಿಯಿಲ್ಲ ಎನ್ನತಕ್ಕಂಥ ಒಂದು ನೋಟ್‌ನ್ನು ಮಾನ್ಯ ಅನಂತ್‌ನಾಗ್‌ರವರು ಬರೆದರು. ಅವರು ಏನು ಬರೆದರು ಎಂದರೆ " the above proposal was placed before the Cabinet at its meeting held on 9-12-1998. It examined the matter at length and deferred its further consideration. In the meanwhile, when the file was submitted to the Minister of State for Bangalore Development, he has observed as follows :

I had a meeting with the Chairman as well as Technical experts of BWSSB who have done the evaluation of Cauvery IV Stage II Phase of water supply project on BOOT basis on 15-12-1998, I have perused the evaluation document and studied the proposal with special reference to

the points raised in the draft Cabinet Note." ಇದರಲ್ಲಿ ಇವರು ಇದು ಸರಿ ಇದು ತಪ್ಪು ಎನ್ನುವುದಕ್ಕೆ ಉತ್ತರ ಕೊಡುತ್ತಾರೆ ಅಂದರೆ ಇವರು ಬಹಳ ಎಕ್ಸ್‌ಪರ್ಟ್. ಒಬ್ಬ ಮಂತ್ರಿಗಳು ನೋಟ್‌ಗೆ ವಿರುದ್ಧವಾಗಿ ನಿರ್ಧಾರ ಕೈಗೊಳ್ಳಲೇಬಾರದು ಎಂಬುದು ನನ್ನ ಅನಿಸಿಕೆ ಅಲ್ಲ. because the Minister has to exercise his authority also but how he has exercised is very important. ಸುಮಾರು 4-5 ಪುಟಗಳಿರುವ ಈ ನೋಟ್ ಎಲ್ಲವನ್ನೂ ನಾನು ಓದುವುದಕ್ಕೆ ಹೋಗುವುದಿಲ್ಲ. ತಾವು ಇದನ್ನು ನೋಡಿದರೆ ಅರ್ಥವಾಗುತ್ತದೆ. ನಗರಾಭಿವೃದ್ಧಿ ಕಾರ್ಯದರ್ಶಿ, ಹಾಗೂ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಏನು ಕಮಿಟಿ ಇತ್ತು, ಈ ಕಮಿಟಿಯವರು ಏನು ರೆಕಮಂಡ್ ಮಾಡಿದ್ದರು ಅದರ ವಿರುದ್ಧವಾಗಿ ಮಾನ್ಯ ಅನಂತನಾಗ್‌ರವರು ಇಷ್ಟೊಂದು ಪುರುಸೊತ್ತು ತೆಗೆದುಕೊಂಡು ಬಹಳ ದೊಡ್ಡದಾದ ನೋಟ್‌ನ್ನು ಬರೆದಿದ್ದಾರೆ. ಬಿಡ್‌ನ್ನು ಇವರಿಗೆ ಕೊಡಬಾರದು ಇನ್ನೂ ಎರಡು ತಿಂಗಳು ಮುಂದಕ್ಕೆ ಹಾಕಿ ನಂತರ ಚರ್ಚೆ ಮಾಡೋಣ ಎನ್ನುವ ಏನು ಅನಿಸಿಕೆ ಇತ್ತು ಅದರ ವಿರುದ್ಧವಾಗಿ ಮಾನ್ಯ ಅನಂತನಾಗ್‌ರವರು ಈ ಒಂದು ದೊಡ್ಡ ನೋಟನ್ನು ಬರೆದರು. ಅವರು ಓಪನ್ನಾಗಿ ಹೇಳಿದ್ದಾರೆ. There cannot be any logical co-relation between the experience of one company and another in the different component such as treatment plant, pumping station, pipeline and investment. A Company can specialise in construction of treatment plant while other may have better experience in laying the pipeline. Most of the water supply schemes have high capacity and low head-pumping or a low capacity high head-pumping ಇದು ಎಲ್ಲಾ ಮಾನ್ಯ ಅನಂತನಾಗ್‌ರವರು ಬರೆದಿರತಕ್ಕಂಥ ನೋಟ್ಸ್. ಅಂದರೆ ಮಾನ್ಯ ಸಚಿವರು ಇದರ ಬಗ್ಗೆ ಎಷ್ಟೊಂದು ಆಳವಾಗಿ ಅಭ್ಯಾಸ ಮಾಡಿ ಪ್ರೈವಾಟರ್ ಕಂಪನಿಗೆ ಫೇವರ್ ಮಾಡುವುದಕ್ಕೆ ಎಷ್ಟು ತೊಂದರೆ ತೆಗೆದುಕೊಂಡಿದ್ದಾರೆಂದರೆ, ನಿಜವಾಗಲೂ ಬೆಂಗಳೂರು ಜನತೆಯ ನೀರಿನ ಗೋಳನ್ನು ಕಡಿಮೆ ಮಾಡುವುದಕ್ಕೆ ಸಾಕಷ್ಟು ಆಸಕ್ತಿ ವಹಿಸಿದ್ದಾರೆ. ಇದಕ್ಕಾಗಿ ಬಹಳ ಶ್ರಮ ವಹಿಸಿದ್ದಾರೆ. ಈ ನೋಟ್ ಮತ್ತು ಕ್ಯಾಬಿನೆಟ್ ನೋಟ್ ನೋಡಿದರೆ ತಮಗೆ ಅರ್ಥವಾಗುತ್ತದೆ. ಯಾವ ದೃಷ್ಟಿಯಿಂದ ಈ ಕಂಟ್ರ್ಯಾಕ್ಟ್ ಪರ್ಟಿಕ್ಯುಲರ್ ಆಗಿ ಖಾಸಗಿ ಕಂಪನಿಗೆ ಅಲಾಟ್ ಆಗಿದೆ ಎನ್ನತಕ್ಕಂಥದ್ದು ಗೊತ್ತಾಗುತ್ತದೆ. ಮಾನ್ಯಮುಖ್ಯಮಂತ್ರಿಗಳಿಗೆ ಇದರಲ್ಲಿ ಸಂಶಯ ಕಾಣುವುದಕ್ಕೆ ಅವಕಾಶವಿಲ್ಲ ಏಕೆಂದರೆ, ಮುಖ್ಯಕಾರ್ಯದರ್ಶಿಯವರ ಮೇಲೆ ಸಂಶಯ ಬರುವುದಕ್ಕೆ ಕಾರಣವಿಲ್ಲ, ಹಾಗೆಯೇ ನಗರಾಭಿವೃದ್ಧಿ ಕಾರ್ಯದರ್ಶಿಗಳ ಮೇಲೆ ಸಂಶಯ ಬರುವುದಕ್ಕೆ ಕಾರಣವಿಲ್ಲ, ಹಣಕಾಸು ಕಾರ್ಯದರ್ಶಿಗಳ ಮೇಲೆ ಸಂಶಯ ಬರುವುದಕ್ಕೆ ಕಾರಣವಿಲ್ಲ, ಇದರ ಜೊತೆಗೆ ಸಂಸದೀಯ ಕಾರ್ಯದರ್ಶಿಗಳು, ಈ ಎಲ್ಲಾ ನಾಲ್ಕು ಜನ ಸೇರಿಕೊಂಡು ಈ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದು. ಇಂಥ ನೋಟ್‌ಗೆ ವಿರುದ್ಧವಾಗಿ ಮಾನ್ಯ ಅನಂತನಾಗ್‌ರವರು ತಮ್ಮ ದೊಡ್ಡ ನೋಟ್‌ನಲ್ಲಿ ಮುಂದುವರಿದು ಹೇಳುತ್ತಾರೆ, the Government Order dated 26-12-1997 on Infrastructure Policy is relevant to the proposal made by the Foreign

Investors and has been issued with an intention to expedite the investment process and not delaying. In this case such a proposal was made by M/s Biwater. After consideration of which the Government Order UBD 48 MNI 97-98, dated 20-6-97, giving sanction to the present scheme was issued much before the G.O. on Infrastructure Policy came of. Thus, the stage of scrutiny by Committee headed by Chief Secretary had already been crossed and the Cabinet gave approval for taking up this project. Further reference to the Committee is therefore unnecessary. That Committee is meant for preliminary clearance of proposal like a Single Window Agency, which stage was passed long back. ಎಂದು ಹೇಳುತ್ತಾ ಈ ರೀತಿ ಅದನ್ನು ತಳ್ಳಿ ಹಾಕುತ್ತಾರೆ. ಇದು ಅರ್ಜೆಂಟ್ ಆಗಿ ಆಗಲೇ ಬೇಕು ಎನ್ನುವುದಕ್ಕೆ ಎಷ್ಟು ಕನ್‌ಸರ್ನ್ ತೋರಿಸುತ್ತಾರೆಂದರೆ, ಇದಕ್ಕೆ ಮತ್ತೊಂದು ಮಾತನ್ನು ಹೇಳುತ್ತಾರೆ. The lack of infrastructure is the biggest bottleneck in attracting investment to Bangalore. The present level supply of water is only about 90 litre per capita per day which is grossly inadequate and well below the prescribed level of 150-200 per capita per day. Even after completion of Cauvery Project State IV, Phase I by the end of December 2001. ಹೀಗೆ ಹೇಳುತ್ತಾ ಕೊನೆಗೆ ನೀವು ಫೈಲ್ ಕ್ಲಿಯರ್ ಮಾಡಲೇಬೇಕು, ಇದಕ್ಕೆ ನಿರ್ಣಯ ತೆಗೆದುಕೊಳ್ಳಬೇಕು ಎಂದು ಹೇಳುತ್ತಾ ಮಾನ್ಯಮುಖ್ಯಮಂತ್ರಿಗಳಿಗೆ ರೆಕಮೆಂಡ್ ಮಾಡಿ ಕಳುಹಿಸುತ್ತಾರೆ. ಆ ಕೊನೆಯ ಪುಟದಲ್ಲಿ ಏನು ಹೇಳುತ್ತಾರೆಂದರೆ, " I am surprised to see that the Principal Secretary of the Urban Development has suggested deferring the decision by further four months. The entire thrust of the argument is only to delay the decision. It needs to be pointed out that it took almost six months to Bangalore Water Supply & Sewerage Board to complete the evaluation and re-evaluation is bound to take as much time which is not in the interest of development of the city in Bangalore. ಅಂದರೆ ಅರ್ಬನ್ ಡೆವಲೆಪ್‌ಮೆಂಟ್ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಮುಖ್ಯಮಂತ್ರಿಗಳು ಇವರೇ ಪರ್ಪಸ್‌ಲಿ ಡಿಲೇ ಮಾಡಿಸುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ಕೂಡ ಇದರಲ್ಲಿ ಅವರು ಹೇಳಿದ್ದಾರೆ. ಇದರಿಂದಾಗಿ ತಡವಾಗುತ್ತಿದೆ. ತರಾತುರಿಯಲ್ಲಿ ನೀವು ನಿರ್ಧಾರ ತೆಗೆದುಕೊಳ್ಳಿ ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಬೆಂಗಳೂರು ವಾಟರ್ ಸಪ್ಲೈ ಅಂಡ್ ಸೂವರೇಜ್ ಬೋರ್ಡ್‌ನವರು ಮಾರ್ಕ್ಸ್ ಕೊಟ್ಟಿದ್ದಾರೆ, ಅವರು ಕೊಟ್ಟಂತಹ ಪಾಯಿಂಟ್ಸ್‌ನ್ನು ಇವರು ಸಮರ್ಥನೆ ಮಾಡಿಕೊಂಡು ಈ ನೋಟನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಕಳುಹಿಸುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಏನನ್ನು ಬರೆಯುತ್ತಾರೆಂದರೆ, these observations should be fully incorporated in

the Cabinet Note ಮುಂದೆ ಮಾನ್ಯ ಮುಖ್ಯಮಂತ್ರಿಗಳು ಬರೆದಿದ್ದೇನೆಂದರೆ " I agree with the observations of the minister and I would like that the subject may be placed before the Cabinet for approval on 23-12-1998 along with the report submitted by BWSSB". Under the circumstances, orders of the Cabinet are solicited in the matter. ಇದನ್ನು ನಮ್ಮ ಸೆಕ್ರೆಟರಿಯವರು ಕ್ಯಾಬಿನೆಟ್‌ನ ಮುಂದೆ ಪ್ಲೇಸ್ ಮಾಡುವುದಕ್ಕೆ ಬರೆದಿರುತ್ತಾರೆ. ಮಾನ್ಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸಚಿವರಾದ ಶ್ರೀ ಅನಂತ್‌ನಾಗ್‌ರವರು ಏನು ಅಬ್ಸರ್‌ವೇಷನನ್ನು ಮಾಡಿದ್ದರು. ಅದನ್ನು ಮಾನ್ಯ ಮುಖ್ಯಮಂತ್ರಿಯವರು ಒಪ್ಪಿಕೊಂಡು ಆ ಅಬ್ಸರ್‌ವೇಷನ್‌ನ ಪ್ರಕಾರವೇ ತಾವು ಇದನ್ನು ಕ್ಯಾಬಿನೆಟ್‌ನ ಮುಂದೆ ತೆಗೆದುಕೊಂಡು ಬನ್ನಿ ಎಂಬ ಮಾತನ್ನು ಹೇಳಿದ್ದಾರೆ. ಇದರಲ್ಲಿ ಯಾವ ಯಾವ ಕಂಪನಿಗಳಿಗೆ ಎಷ್ಟೆಷ್ಟು ಮಾರ್ಕ್ಸ್‌ನ್ನು ಕೊಟ್ಟಿದ್ದಾರೆ ಎಂಬ ಬಗ್ಗೆ ನಾನು ಪುನಃ ಓದುವುದಕ್ಕೆ ಹೋಗುವುದಿಲ್ಲ. ಇದರ ಬಗ್ಗೆ ಮಾನ್ಯ ನಂಜೇಗೌಡರೂ ಸಹ ಸಾಕಷ್ಟು ಸಲ ಪ್ರಸ್ತಾಪ ಮಾಡಿದ್ದಾರೆ. ಇವರು ಯಾವ ರೀತಿಯಾಗಿ ಎಕ್ಸ್‌ಟರ್ನಲ್ ಏಜೆನ್ಸಿಗಳಿಗೆ ಎಷ್ಟು ಮಾರ್ಕ್ಸ್‌ಗಳನ್ನು ಅಲಾಟ್ ಮಾಡಿದ್ದರು ಹಾಗೂ ಇವರದ್ದೇ ಆದಂತಹ ಎಕ್ಸಪರ್ಟ್ ಕಮಿಟಿಗೆ ಎಷ್ಟು ಮಾರ್ಕ್ಸ್‌ನ್ನು ಅಲಾಟ್ ಮಾಡಿದ್ದರು ಎನ್ನುವಂತಹ ಎಲ್ಲಾ ಮಾಹಿತಿಗಳು ನನ್ನ ಹತ್ತಿರ ಇದೆ. ನಾನು ಇದನ್ನು ತಮಗೆ ಕಳುಹಿಸಿಕೊಡುತ್ತೇನೆ. ಆ ಮಾರ್ಕ್ಸ್, ಕ್ಯಾಬಿನೆಟ್ ನೋಟ್, ಶ್ರೀ ಅನಂತ್‌ನಾಗ್‌ರವರು ಬರೆದಂತಹ ನೋಟ್, ಮಾನ್ಯ ಸಚಿವರು ಬರೆದಂತಹ ನೋಟಿಗೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಂತಹ ಒಪ್ಪಿಗೆಯ ದಿನಾಂಕ ಎಲ್ಲವನ್ನೂ ತಮಗೆ ಕಳುಹಿಸಿಕೊಡುತ್ತೇನೆ. ಇಷ್ಟೊಂದು ವೇಗದಿಂದ ಈ ನಿರ್ಧಾರಗಳನ್ನು ತೆಗೆದುಕೊಂಡಿದ್ದಾರೆ. ಪ್ರಮುಖವಾಗಿರತಕ್ಕ ವಿಷಯವೇನೆಂದರೆ, ಮಲೇಷಿಯನ್ ಕಂಪನಿಗೆ ಕೊಡಬೇಕೆಂಬ ನಿರ್ಧಾರವನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಮಂಡಲದ ಸದಸ್ಯರಲ್ಲಿ ಒಬ್ಬರು ತಯಾರಿ ನಡೆಸಿ ಅದಕ್ಕೆ ಕೊಡುವಂತಹ ವ್ಯವಸ್ಥೆಯನ್ನು ಮಾಡಿದ್ದಾರೆ, ಎನ್ನುವ ಬಗ್ಗೆ ಸಾಕಷ್ಟು ಪುರಾವೆಗಳಿವೆ ಇದರ ಬಗ್ಗೆ ನಾನು ಸ್ಪಷ್ಟವಾಗಿ ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುವುದೇನೆಂದರೆ, ಇಂತಹ ಒಂದು 1500 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತರಾತುರಿಯಲ್ಲಿ ಮಾಡುವಂತಹ ಅವಶ್ಯಕತೆ ಇಲ್ಲ. ಆದ್ದರಿಂದ ಇದನ್ನು ಕೈಬಿಡಬೇಕು. ತಾವು ಪುನಃ ಗ್ಲೋಬಲ್ ಟೆಂಡರ್‌ನ್ನು ಕಾಲ್‌ಫರ್ ಮಾಡಬೇಕು. ಈ 3-4 ಇಂಪಾರ್ಷಿಯಲ್ ಕಂಪನಿಗಳಿಗೆ ಈ ಕೆಲಸವನ್ನು ವಹಿಸಬೇಕು. ನಾವು ಏನು 1500 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಯೋ ಆ ಹಣವನ್ನು ಬೆಂಗಳೂರು ನಗರದ ಜನತೆಯಿಂದ ವಸೂಲು ಮಾಡುವಂತದ್ದು. ನಾವು ವಾರ್ಷಿಕವಾಗಿ 400 ಕೋಟಿ ರೂಪಾಯಿಗಳನ್ನು ರಿಪೇಮೆಂಟ್ ಮಾಡಬೇಕಾಗುತ್ತದೆ. ಹಾಗೆಯೇ 1500 ಕೋಟಿರೂಪಾಯಿ ಮೇಲಿನ ಬಡ್ಡಿಯನ್ನು ನಾವು 60 ಲಕ್ಷ ಜನ ಸಂಖ್ಯೆಗೆ ಲೆಕ್ಕ ಹಾಕಿದರೆ ಹೆಚ್ಚು ಕಡಿಮೆ ತಲಾ 400 ರೂಪಾಯಿಗಳು ಬೀಳುತ್ತವೆ. ಒಂದು ಮನೆಯವರು ನೀರನ್ನು ಕುಡಿಯಲಿ ಅಥವಾ ಬಿಡಲಿ ಅಥವಾ ಬೋರ್‌ವೆಲ್ ನೀರನ್ನು ಕುಡಿಯಲಿ ಮಿನಿಮಮ್ 400 ರಿಂದ 500 ರೂಪಾಯಿಗಳ ಕಂದಾಯಗಳನ್ನು ಪ್ರತಿವರ್ಷ ಕೊಡಬೇಕಾಗುತ್ತದೆ. ಇದನ್ನು ಮಾಡಿದರೆ ತಮ್ಮ ಮೇಲೆ ದೊಡ್ಡ ಆಪಾದನೆಯೂ ಸಹ ಬರುತ್ತದೆ. ತಾವು ಎಷ್ಟೇ ಇಲ್ಲವೆಂದರೂ

ಕೂಡ ಇವಕ್ಕೆ ಅಪ್ರೂವಲ್ ಕೊಡಬೇಕೆಂದು ಒಳಗಿಂದೊಳಗಡೆ ಪ್ರಯತ್ನಗಳೂ ಸಹ ನಡೆದಿವೆ. ತಾವು ಆ ಪ್ರಯತ್ನವನ್ನು ನಡೆಸಬಾರದು. ಇದರಲ್ಲಿ ಏನಾಗಿದೆ ಎಂಬ ಬಗ್ಗೆ ಪರಿಶೀಲಿಸಲು ನೀವು ಮೇಲ್ಮನೆ ಮತ್ತು ಕೆಳಮನೆಗೆ ಸಂಬಂಧಪಟ್ಟ ಹಾಗೆ ಒಂದು ಜಂಟಿ ಸದನ ಸಮಿತಿಯನ್ನು ಮಾಡಿ. ಇದಕ್ಕೆ ಸಂಬಂಧಪಟ್ಟ ಎಲ್ಲಾ ಡಾಕ್ಯೂಮೆಂಟ್ಸ್‌ನ್ನು ಸದನದ ಮುಂದೆ ಇಡಬೇಕು. ತಾವು ಮೇಲ್ಮನೆ ಹಾಗೂ ಕೆಳಮನೆ ಸದಸ್ಯರನ್ನು ಏನು ನೇಮಕ ಮಾಡುತ್ತೀರೋ ಆ ಸದಸ್ಯರುಗಳ ಮುಂದೆ ಎಲ್ಲಾ ಫ್ಯಾಕ್ಟ್ಸ್ ಮತ್ತು ನೋಟ್ಸ್‌ಗಳನ್ನು ಇಡಿ. ಆಗ ಇದರಲ್ಲಿ ಯಾರ್ಯಾರು ಆಸಕ್ತಿ ವಹಿಸಿ ಏನೇನು ಕೆಲಸಗಳನ್ನು ಯಾವ ಯಾವ ದಿನಾಂಕಗಳಲ್ಲಿ ಮಾಡಿದ್ದಾರೆ ಎನ್ನುವಂತಹ ವಿಷಯ ಹೊರಗಡೆ ಬರುತ್ತದೆ. ಆದ್ದರಿಂದ ಈ ವಿಷಯದ ಬಗ್ಗೆ ನಾನು ಜಂಟಿ ಸದನ ಸಮಿತಿಯನ್ನು ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಅಲ್ಲಿಯವರೆಗೆ ಇದನ್ನು ಮುಂದುವರಿಸಿಕೊಂಡು ಹೋಗಬಾರದು. ಇದರಲ್ಲಿ ಸಾಕಷ್ಟು ವ್ಯತ್ಯಾಸಗಳು ಹಾಗೂ ತಪ್ಪುಗಳು ಮತ್ತು ಅನೇಕ ಸಂಶಯಗಳನ್ನು ಉಂಟು ಮಾಡುವಂತಹ ವಿಷಯಗಳು ಇವೆ. ಇದಲ್ಲದೆ ಪತ್ರಿಕೆಗಳ ಮುಖಾಂತರ ಅನೇಕ ಮೀಡಿಯಾ ಮುಖಾಂತರನೂ ಕೂಡ ಒಬ್ಬ ಮಲೇಷಿಯನ್ ಮಂತ್ರಿಯವರೇ ಡೈರೆಕ್ಟಾಗಿ ಆ ಕಂಪನಿಗಳ ಜೊತೆಯಲ್ಲಿ ಅವರ ಸಂಬಂಧವನ್ನು ಇಟ್ಟುಕೊಂಡಿದ್ದಾರೆ. ಹಾಗೂ ಅವರು ಪರ್ಸನಲಿ ವೆರಿಮಚ್ ಇಂಟರೆಸ್ಟೆಡ್ ಇದೆ ಎನ್ನುವುದು ಇವತ್ತು ಹೊರಗಡೆ ಬಂದಿದೆ. ಸರ್ಕಾರ ಇನ್‌ವೆಸ್ಟ್‌ಮೆಂಟ್ ಮಾಡುವುದೇ ಬೇರೆ. As a Minister personally if he is interested in a particular Firm and that Firm wants to take a contract of the Government, then it is unfair and it cannot be judicious. ಅದಕ್ಕಾಗಿ ತಾವು ಜಂಟಿಸದನ ಸಮಿತಿಯನ್ನು ನೇಮಿಸಬೇಕು. ಅಲ್ಲಿಯವರೆಗೆ ಈ ಕಾರ್ಯಾಚರಣೆಯನ್ನು ಮಾಡಬಾರದು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

+ **ಶ್ರೀ ಹೆಚ್. ಎನ್. ನಂಜೇಗೌಡ** (ಬಸವನಗುಡಿ) : ಮಾನ್ಯ ಅಧ್ಯಕ್ಷರೆ, ಅವೊತ್ತು ಮಾತನಾಡತಕ್ಕ ಕಾಲದಲ್ಲಿ ತುಂಬಾ ವಿವರವಾಗಿ ಹೇಳಿದ್ದೇನೆ. ಇದರಲ್ಲಿ ಎರಡು ಇಷ್ಯೂಸ್‌ಗಳಿವೆ. ಒಇಸಿಎಫ್‌ನ ಅಸಿಸ್ಟೆಂಟ್ಸ್ ತೆಗೆದುಕೊಂಡು ಕಾವೇರಿ ಯೋಜನೆಯ 4ನೇ ಘಟ್ಟದ ಮೊದಲನೆಯ ಹಂತ ಮಾಡತಕ್ಕದ್ದು. 1072 ಕೋಟಿರೂಪಾಯಿಗಳ ವೆಚ್ಚದಲ್ಲಿ 270 ಮಿಲಿಯನ್ ಲೀಟರ್ ಪರ್‌ಡೇ ನೀರು ತರುವುದು ಇದರ ಉದ್ದೇಶ 1993 ರಲ್ಲಿ ಥರ್ಡ್‌ಸ್ಟೇಜ್ ಮುಗಿಸಿದ್ದು ಅದಕ್ಕೆ 270 ಕೋಟಿ ರೂಪಾಯಿಗಳು ಖರ್ಚಾಯಿತು. ಈಗ ರೇಟ್ ಡಬ್ಬಲ್ ಆಗಿದೆ ಅಂದರೂ 540 ಕೋಟಿರೂಪಾಯಿಗಳ ಮೇಲಾಗಬಾರದು. ಆದರೆ ಈಗ ಇದು 1072 ಕೋಟಿ ರೂಪಾಯಿಗಳು ಆಗಿದ್ದು ಇದರಲ್ಲಿ ಗೋಲ್‌ಮಾಲ್ ನಡೆದಿದೆ. ಇದು ಸಾಲ ತಂದು ನಾವು ಮಾಡಿಸುವುದು. ಇದನ್ನು ಮರೆಯಬಾರದು. ಕನ್ಸಲ್‌ಟೆನ್ಸಿಗೆ ಎಷ್ಟು ಹಾಕಿದೆ ಅದರ ಡೀಟೈಲ್ಸ್ ಎಲ್ಲವನ್ನೂ ಅವೊತ್ತು ಕೊಟ್ಟಿದ್ದೇನೆ. ನನ್ನ ಅಂದಾಜು 400 ಕೋಟಿ ರೂಪಾಯಿ ಹೆಚ್ಚಿಗೆ ಅಪ್ರೀಷಿಯೇಟ್ ಮಾಡಿಕೊಂಡು ಇದು ಲೂಟಿ ಮಾಡತಕ್ಕ ವ್ಯವಹಾರ ನಡೆದಿದೆ. ಸರ್ಕಾರದ ಅಭಿಪ್ರಾಯದಲ್ಲಿ 4ನೇ ಘಟ್ಟದ ಮೊದಲನೆಯ ಹಂತ 2002ನೇ ಇಸವಿಯೊಳಗೆ ಮುಗಿಯಬೇಕು.

ಅದೊಂದು ಅಂದಾಜು ಏನೆಂದರೆ, ಆಗ ಬೆಂಗಳೂರಿನಲ್ಲಿ 70ಲಕ್ಷ ಜನಸಂಖ್ಯೆಯಾಗುತ್ತದೆ. ಆದ್ದರಿಂದ ಇಷ್ಟು ನೀರು ಆದರೆ ಸಾಕು ಎನ್ನುವ ಲೆಕ್ಕಚಾರ. ಇವತ್ತು ಇರತಕ್ಕ ನೀರು ಹಾಗೂ ನಾವು ನಗರಕ್ಕೆ ತರತಕ್ಕ ನೀರು ಇವುಗಳನ್ನೆಲ್ಲಾ ದಯವಿಟ್ಟು ಮುಖ್ಯಮಂತ್ರಿಗಳು ಗಮನಕ್ಕೆ ಹಾಕಿಕೊಳ್ಳಬೇಕು. 675 ಮಿಲಿಯನ್ ಲೀಟರ್ ಪರ್‌ಡೇ ತರುತ್ತಿದ್ದೇವೆ. ಕಾವೇರಿ ಮತ್ತು ಅರ್ಕಾವತಿಯದೂ ಸೇರಿ. ಕಾವೇರಿ 540 ಅರ್ಕಾವತಿ 135 ಈಗ 4ನೇ ಘಟ್ಟದ 2ನೆ ಹಂತ 2007ರೊಳಗೆ ಮುಗಿಯಬೇಕು. 270 ಮಿಲಿಯನ್ ಲೀಟರ್ ಕೆಲಸ. ಆಮೇಲೆ ಉಳಿದಂತಹ 270 ಮಿಲಿಯನ್ ಲೀಟರ್‌ಗೆ 2012ನೇ ಇಸವಿಯೊಳಗೆ ಮುಗಿಯಬೇಕು. ಅಂದರೆ ಜನಸಂಖ್ಯೆ ಏರಿದಹಾಗೆ ಎನ್ನುವುದು ನಿಮ್ಮ ಭಾವನೆ. ಇದು ನಿಮ್ಮ ಗೌರ್ನಮೆಂಟ್ ಆರ್ಡರ್ ಪ್ರಕಾರ ಇದೆ. ಅದನ್ನು ಗೋಲ್‌ಮಾಲ್ ಮಾಡಿದ್ದಾರೆಂದು ನಾನು ಹೇಳಿದ್ದೇನೆ. ಇದರಲ್ಲಿ ಏನಾಯಿತು ಅಂದರೆ 9 ಜನ ಟೆಂಡರ್ ಕೂಗಿ ತೆಗೆದುಕೊಂಡು ಹೋದರಲ್ಲಾ ಆಗ ಅವರಿಗೆ ಗೊತ್ತಾಯಿತು ಇಲ್ಲಿ ಪೊಲಿಟಿಕಲ್ ಸಕ್ಸಸ್ ಇದೆಯೆಂದು. ಛೇರ್ಮನ್ ಸರ್ಕಾರಕ್ಕೆ ಮೂರು ಕಾಗದ ಬರೆಯುತ್ತಾರೆ. ಪ್ರೈವಾಟರ್‌ಗೆ ರೆಕಮಂಡ್ ಮಾಡಿ ಎಂದು ಮೂರು ಕಾಗದ ಬರೆದಮೇಲೆ ಸರ್ಕಾರದವರು ಒಂದು ಪಾಲಿಸಿ ಡಿಸಿಷನ್ ತೆಗೆದುಕೊಳ್ಳುತ್ತಾರೆ. To privatise water supply ಆದರೆ ಪ್ರೈವಾಟರ್ ಅಪ್ರೂವ್ ಮಾಡುವುದಿಲ್ಲ. ಟೆಂಡರ್ ಕರೆಯಿರಿ ಎಂದು ಕಳುಹಿಸುತ್ತಾರೆ. ಮೊದಲನೆಯದಾಗಿ ಈಗೇನು ನೀವು 500 ಮಿಲಿಯನ್ ಲೀಟರ್‌ಗೆ ಮಲೇಶಿಯಾದ ಕಂಪನಿಗೆ ಕೊಡಬೇಕೆಂದು ಮಾಡಿಕೊಂಡಿದ್ದೀರಿ ಅದರ ಅವಶ್ಯಕತೆ ಇವತ್ತು ಇಲ್ಲ. ಅದನ್ನು ಇನ್ನೂ 8-10ವರ್ಷ ಬಿಟ್ಟು ಪ್ಲಾನ್ ಮಾಡುತ್ತಾರೆ. ಅವೊತ್ತು ಯಾವ ಸರ್ಕಾರ ಇರುತ್ತದೋ ಅವರು ಬರುತ್ತಾರೆ ಅವರು ಬುದ್ಧಿವಂತಿಕೆಯಲ್ಲಿ ಮಾಡುತ್ತಾರೆ. ಈಗ ಏನು ಇನ್ನೂ 270 ಮಿಲಿಯನ್ ಲೀಟರ್ ನೀರು ನಗರಕ್ಕೆ ತರಬೇಕು ಅಷ್ಟಕ್ಕೆ ಮಾತ್ರ ನೀವು ಸೀಮಿತ ಮಾಡಿಕೊಳ್ಳಬೇಕು. ಇನ್ನೊಂದು ಏನೆಂದರೆ ವರ್ಷಕ್ಕೆ 400ಕೋಟಿ ರೂಪಾಯಿಗಳು ಬೆಂಗಳೂರು ಸಿಟಿ ಕಾರ್ಪೊರೇಷನ್ ಬಜೆಟ್ ಏನು ಇದೆಯಲ್ಲಾ ಅದು 420 ಕೋಟಿ ರೂಪಾಯಿಗಳು. ಇವತ್ತು ಬೆಂಗಳೂರು ಜನ ಪ್ರಾಪರ್ಟಿ ಟ್ಯಾಕ್ಸ್ ಕೊಡುತ್ತಿರುವುದು 90 ಕೋಟಿ ರೂಪಾಯಿಗಳು. ನಾವು ಫುಲ್‌ಕೆಪ್ಯಾಸಿಟಿ ನೀರು ಉಪಯೋಗಿಸಿಕೊಂಡರೆ 468 ರೂಪಾಯಿಗಳ ಮೇಲೆ ಹಣ ಕೊಡಬೇಕು. ಅವನು ಮಾಡುವುದೇನು ? ಏನೇನೂ ಇಲ್ಲ. ಬೆಂಗಳೂರು ಹತ್ತಿರದಲ್ಲಿ ಎರಡು ಟ್ಯಾಂಕ್ ಕಟ್ಟಿಬಿಟ್ಟು ಮೀಟರ್ ಹಾಕಿಬಿಡುತ್ತಾನೆ. ಅಲ್ಲಿಂದ ಒಂದು ಲೈನ್ ಎಳೆದು ನೀರು ಪಂಪ್ ಮಾಡಿ ಮೀಟರ್ ಹಾಕುವುದು. ಅವನು ಎಷ್ಟು ಖರ್ಚುಮಾಡುತ್ತಾನೆ ಎನ್ನುವುದು ನನಗೆ ಮುಖ್ಯವಲ್ಲ. 30 ವರ್ಷಗಳ ಕಾಲ 468 ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣವನ್ನು ಬೆಂಗಳೂರಿನ ಜನ ನಾವು ಕೊಡಬೇಕು. ಒಟ್ಟು 13 ಸಾವಿರ ಕೋಟಿ ರೂಪಾಯಿಗಳಿಗೂ ಮೇಲೆ ನಾವು ಕೊಡಬೇಕು. ಇದು ಯೋಗ್ಯವಾದ ತೀರ್ಮಾನವೇ ? ಈಗ ಪ್ರೈವಾಟರ್ ಕಂಪನಿಗೆ ಕೊಡಬೇಕೆಂದು ಪಾಲಿಸಿ ಡಿಸಿಷನ್ ತೆಗದುಕೊಳ್ಳುತ್ತಾರೆ. ಇದನ್ನು ಪ್ರೈವೆಟೈಜ್ ಮಾಡುತ್ತೇವೆಂದು ಆ ಪ್ರೈವಾಟರ್ ಕಂಪನಿಗೆ ಕೊಡಬೇಕೆಂದು ಮೂರು ಸಾರಿ ಛೇರ್ಮನ್ ರೆಕಮಂಡ್ ಮಾಡಿರುತ್ತಾರೆ. ಆ ಮಂತ್ರಿಗಳೆಲ್ಲಾ ಬಂದು ಹೋಗಿರುತ್ತಾರೆ. ಆ ರಾಷ್ಟ್ರದಲ್ಲಿ ಅಂದರೆ ಮಲೇಶಿಯಾದಲ್ಲಿ ಆ ಮಂತ್ರಿ ಅಫಿಷಿಯಲ್ ಆಗಿ ಕಮಿಷನ್ ತೆಗೆದುಕೊಳ್ಳಬಹುದು. ಅಲ್ಲಿಅದು ಅಪರಾಧವಲ್ಲ. ಇದು ಎಲ್ಲಾ ಅವೊತ್ತು ನಾನು

ಹೇಳಿದ ಹಾಗೆ ಪ್ರತಿಯೊಂದು ಹಂತದಲ್ಲೂ ತರಾತುರಿಯಿಂದ ಆಗಿದೆ. 9-12-1998ರ ಮೀಟಿಂಗ್‌ನಲ್ಲಿ ಮೊದಲನೆಯ ಕ್ಯಾಬಿನೆಟ್ ನೋಟ್ ಬಂತು. ಅಧ್ಯಕ್ಷರು ಮಾಡುವುದಕ್ಕೆ ಮತ್ತೆ ಕಮಿಟಿ ಏತಕ್ಕೆ ಬೇಕಾಗಿತ್ತು? ಸಾಧ್ಯವಾದರೆ ಆ ಕಮಿಟಿಯವರ ತಲೆಯ ಮೇಲೆ ಹಾಕಬಹುದಲ್ಲಾ, ಅವರು ಒಪ್ಪಿದರೆ. ಅವರು ತಿಳುವಳಿಕೆ ಇದ್ದ ಹಾಗೆ ಮಾಡಿದ್ದಾರೆ. ಅದು ಕ್ಯಾಬಿನೆಟ್‌ಗೆ ಬರುತ್ತದೆ. It was seized of the cabinet -inconclusive discussions. ಅದು ಹೇಗೆ ಫೈಲ್ ಅನಂತನಾಗ್‌ರವರಿಗೆ ಹೋಯಿತು? ಆ ಫೈಲ್ ಹೋದ ತರಾತುರಿಯಲ್ಲಿ 15ನೇ ತಾರೀಖು ಅವರು ಡಿಸ್‌ಕಷನ್ ಮಾಡಿದ್ದಾರೆ. ಅವರು ಯಾವ ಡೇಟ್‌ನಲ್ಲಿ ಸಹಿ ಹಾಕಿದ್ದಾರೋ ನನಗೆ ಗೊತ್ತಿಲ್ಲ ಅದರ ಡೀಟೈಲ್ಸ್ ಇಲ್ಲಿ ಇಲ್ಲ. ಇವರು 15ನೇ ತಾರೀಖು ಅಂದರೆ ಎಂಟು ದಿವಸಗಳ ನಂತರ 23ನೇ ತಾರೀಖಿಗೆ ಅಂದರೆ ನೆಕ್ಸ್ಟ್ ಕ್ಯಾಬಿನೆಟ್ ಮೀಟಿಂಗ್‌ಗೆ ಇಡಿ ಎಂದು ಅವರು ಬರೆಯುತ್ತಾರೆ. ಅದರಲ್ಲಿ ನೀವು ಏನು ಹೇಳಿದಿರಿ? ಇನ್ನೂ ನಾವು ಏನು ತೀರ್ಮಾನ ತೆಗೆದುಕೊಂಡಿಲ್ಲ ಪುನ : ಅದೆಲ್ಲಾ ನೆಗೋಷಿಯೇಟ್ ಮಾಡಿ ಸರ್ಕಾರಕ್ಕೆ ವಾಪಸ್ಸು ಕಳುಹಿಸುತ್ತಾರೆ ಎಂದು. ಅದು ಹಾಗೆ ಇಲ್ಲ, ನಿಮ್ಮ ಕ್ಯಾಬಿನೆಟ್ ಡಿಸಿಷನ್. ಅಲ್ಲಿ ರೆಕಮಂಡ್ ಆದದ್ದು ಏನು " The Cabinet may, therefore, approve to award the Cauvery Stage-IV, Phase II project to the consortium led by M/s BIWATER, the highest scorer in the evaluation, and authorise the Chairman, Bangalore Water Supply and Sewerage Board to sign the necessary agreement after the negotiation and proceed with the execution of the project." ಇದು ಸರ್ಕಾರಕ್ಕೂ ಬರಬೇಕಾಗಿಲ್ಲ ಏನೂ ಬರಬೇಕಾಗಿಲ್ಲ ಇದು ನೀವು ಅಪ್ರೂವ್ ಮಾಡಿರತಕ್ಕದ್ದು. ನಾನು ಹೆಚ್ಚಿಗೆ ಹೇಳುವುದಿಲ್ಲ. ಪಟೇಲರಿಗೆ ಇತ್ತೀಚೆಗೆ ದೇವರಲ್ಲಿ ನಂಬಿಕೆ ಬಂದಿದೆ. ಮಹದೇಶ್ವರಬೆಟ್ಟಕ್ಕೆ ಹೋಗುತ್ತೀರಿ, ಶಬರಿಮಲೈಗೆ ಹೋಗುತ್ತೀರಿ, ನೀವು ಸ್ವಲ್ಪ ಪ್ರಾಮಾಣಿಕವಾಗಿ ಯೋಚನೆ ಮಾಡಿ. ಇದು ನಡೆದಿರುವ ವ್ಯವಹಾರ ಸರಿಯೇ? ವಾಟಾಳ್ ನಾಗರಾಜ್‌ರವರು ಬಂದಿಲ್ಲ, ಅವರು ಹೇಳುತ್ತಿದ್ದರು ನಮ್ಮ ಪಟೇಲರು ಭಾರಿ ಅಲ್ಪತೃಪ್ತರು ಎಂದು. ಹಿಂದೆ ನಾನೊಂದು ಕತೆಯನ್ನು ಹೇಳುತ್ತಿದ್ದೆ ಬಂಗಾರಪ್ಪನವರ ವಿಷಯಕ್ಕೆ ಮಡ್ಡಿ ಮುಳಿ ಕೊಡುವ ಅಭ್ಯಾಸವೆಂದು. ಮಡ್ಡಿಮುಳಿ ಅಂದರೆ ಮಹಾರಾಜರಿಗೆ ಮಡ್ಡಿಮುಳಿ ನಶ್ಯೆ ಮಾಡಿಕೊಟ್ಟರೆ ಒಂದು ಉಂಬಳಿ ಬರೆದು ಕೊಟ್ಟು ಬಿಡುತ್ತಿದ್ದರು. ಈಗ ನಮ್ಮ ಪಟೇಲರ ಕತೆ ಹಾಗೆ ಆಗಿದೆ. ಇದೇನು ನಾವು ದಾನ ಕೊಡುವುದಕ್ಕಾ ಇಲ್ಲಿರುವುದು? ಬೆಂಗಳೂರು ಜನರ ತಲೆ ಹೊಡೆದು ಯಾರಿಗೋ ತಿನ್ನಿಸುವುದಕ್ಕಾ ಇರುವುದು? ಇದು ಹೇಗೆ ಆಗುತ್ತದೆ ಎಂದು ನನಗೆ ಊಹೆ ಮಾಡಿಕೊಳ್ಳುವುದಕ್ಕೂ ಆಗುತ್ತಿಲ್ಲ. ಊಹೆ ಮಾಡಿದರೆ ನನಗೆ ನಿದ್ರೆ ಬರುವುದಿಲ್ಲ. ಅವನಿಗೆ ವರ್ಷಕ್ಕೆ 400 ಕೋಟಿ ರೂಪಾಯಿಗಳು ಅಂದರೆ ಅವನು ತರುವ ನೀರು ಅಲ್ಲಿಯವರೆಗೆ ಮಾತ್ರ ಈಚೆ ಕಡೆಗೆ ಬೇರೆ ಖರ್ಚು ಆಗುತ್ತದೆ. ಉಳಿದ ಇನ್‌ಫ್ರಾಸ್ಟ್ರಕ್ಚರ್ ಎಲ್ಲಾ ನಮ್ಮದೇ. ಡಿಸ್ಟ್ರಿಬ್ಯೂಷನ್ ನಮ್ಮದು ಮೈಂಟೆನೆನ್ಸ್ ನಮ್ಮದು. ಅದೆಲ್ಲಾ ಸೇರಿದರೆ ಬೆಂಗಳೂರು ಜನ ಬರಿ ನೀರಿಗೆ ವರ್ಷಕ್ಕೆ 700 ಕೋಟಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ದಯವಿಟ್ಟು ಈ ಕಾರ್ಯವನ್ನು ಮಾಡಬೇಡಿ. ಈ ರೀತಿ ಮಾಡಿದರೆ ದೇವರು ನಿಮಗೆ ಒಳ್ಳೆಯದು ಮಾಡುವುದಿಲ್ಲ.

ಇದನ್ನು ರದ್ದು ಮಾಡಿ ಎಂದು ನಾನು ಕೈಮುಗಿದು ಕೇಳಿಕೊಳ್ಳುತ್ತೇನೆ. ಇದರ ಅವಶ್ಯಕತೆ ಈಗ ಇಲ್ಲ. ಇದನ್ನು ನಾಲ್ಕೈದು ವರ್ಷ ಮುಂದಕ್ಕೆ ಹಾಕಿ ಮುಂದೆ ಬರುವ ಸರ್ಕಾರ ಯೋಚನೆ ಮಾಡಿ ಪ್ಲಾನ್ ಮಾಡುತ್ತದೆ. ಜೊತೆಗೆ ಮೊದಲು ಏನು ಜಪಾನ್‌ನಿಂದ ಸಾಲ ತಂದು ಮಾಡುತ್ತಿದ್ದೀರಿ ಅದನ್ನು ನೀವು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಬೇಕು. ಇದನ್ನು ಕೈಬಿಡಬೇಕು ಹಾಗೂ ಅದನ್ನು ನೀವು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಬೇಕು. ಇಷ್ಟನ್ನು ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಎಸ್. ಸುರೇಶ್‌ಕುಮಾರ್** (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರು ಎರಡನೆಯ ಭಾರಿ ಬಹಳ ಸವಿಸ್ತಾರವಾಗಿ ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ. ನಾನು ಮೊದಲೇ ಎರಡು ಸಂಗತಿಗಳನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ. ಸುರೇಶ್‌ಕುಮಾರ್‌ರವರು ಬೆಂಗಳೂರು ನಗರದ ನಾಗರೀಕರ ಪರವಾಗಿ ಅತ್ತು ಅತ್ತು ಬಹಳ ಕಣ್ಣೀರು ಸುರಿಸಿದರು ಎಂದು ಮತ್ತೆ ಹೇಳಬೇಡಿ. righteous anguishness ನಿಂದ ನಾನು ಹೇಳುತ್ತಿದ್ದೇನೆ. ಯಾವುದೇ ಕಳಕಳಿಯ ನಾಟಕ ಆಡುವುದಕ್ಕೋಸ್ಕರ ನಾನು ಇಲ್ಲಿ ನಿಂತಿಲ್ಲ. ಯಾವುದೇ ಸಂಸ್ಥೆಯ ಪರ ವಕಾಲತ್ ಹಾಕುವುದಕ್ಕೆ ನಾವು ಇಲ್ಲಿ ನಿಂತಿಲ್ಲ. ನಾಗರೀಕರ ಪರ ವಕಾಲತ್ತು ಹಾಕುವುದಕ್ಕೋಸ್ಕರ ನಾನು ಇಲ್ಲಿ ನಿಂತಿದ್ದೇನೆ. ಈ ಎರಡು ಅಂಶವನ್ನು ತಮ್ಮ ಗಮನಕ್ಕೆ ನಾನು ಮೊದಲೇ ತಂದುಬಿಟ್ಟಿದ್ದೇನೆ. ಕಾನೂನಿನ ವಿಚಾರ ಬಂದಾಗ, ಒಂದು ಮಾತು ಹೇಳುತ್ತಾರೆ. Justice should not only be done it should be seem to be done also ಎಂದು ಈ ಪ್ರಕರಣದಲ್ಲಿ ಈವೊಂದು ಭಾವನೆ ಏನಿದೆ, ಇದರ ಅತ್ಯಂತ ಹೆಚ್ಚಿನ ಅಗತ್ಯ ಇವತ್ತು ಇದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ನಂಜೇಗೌಡರು ಹೇಳಿದಹಾಗೆ ಇದು ಸಾಮಾನ್ಯವಾಗಿ ಕರೆಯುವಂತಹ ಟೆಕ್ನಿಕಲ್ ಟೆಂಡರ್ ಅಲ್ಲ. It is a tender with a definite political patronage. ಯಾವ ವ್ಯಕ್ತಿ ಯಾವ ಪಾರ್ಟಿ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಎಷ್ಟರಮಟ್ಟಿಗೆ ಪೊಲಿಟಿಕಲ್ ಪ್ಯಾಟ್ರನೈಜ್ ಇದೆಯೆಂದರೆ ಇದೆಲ್ಲಾ ಕ್ಯಾಬಿನೆಟ್‌ನಲ್ಲಿ ಬಂದಿದ್ದು ಮೊನ್ನೆ 1998ರಲ್ಲಿ. ಬಹಳ ಆಶ್ಚರ್ಯವಾದ ಅಂಶವೆಂದರೆ, ಈ ಬೈವಾಟರ್ ಸಂಸ್ಥೆಯು ಏನಿದೆ they were included in a conference in U. K. ವಾಟರ್‌ಸಪ್ಲೈ ಬಗ್ಗೆ ಒಂದು ಕಾನ್ಫರೆನ್ಸ್ ನಡೆಯಿತು. They were included in a conference in UK in the summer of 1998. 1998ರಲ್ಲಿ ನಡೆದ ಒಂದು ಕಾನ್ಫರೆನ್ಸ್‌ನಲ್ಲಿ ಈ ಬೈವಾಟರ್‌ನವರು ಪಾರ್ಟಿಸಿಪೇಟ್ ಆಗುತ್ತಾರೆ. They presented a paper on how they had won the largest Water BOOT Project in India, in Bangalore. ಬೆಂಗಳೂರಿನಲ್ಲಿ ಇಡೀ ಭಾರತಕ್ಕೆ ಸಂಬಂಧಿಸಿದಂತಹ ಅತಿ ದೊಡ್ಡ ಪ್ರಾಜೆಕ್ಟ್‌ನ್ನು ನಾವು ಹೇಗೆ ಗೆದ್ದುಕೊಂಡಿದ್ದೇವೆಂದು ಪೇಪರ್‌ಪ್ರೆಸೆಂಟ್ ಮಾಡತಕ್ಕ ದಾರ್ಷ್ಟ್ಯತನವನ್ನು ತೋರಿಸುತ್ತಾರೆ ಬೈವಾಟರ್‌ನವರು, ಬಿಡ್ಸ್ ಅಪ್ರೂವ್ ಆಗಿಲ್ಲ. ನೀವು ಹೇಳುವ ಹಾಗೆ ಸೆಕೆಂಡ್ ಕ್ಯಾಬಿನೆಟ್ ನೋಟ್ ಬಂದಿಲ್ಲ. 1998 ಸಮ್ಮರ್‌ನಲ್ಲಿ ಮಾಡುತ್ತಾರೆ. ಬಹಳ ಮುಖ್ಯವಾದುದೆಂದರೆ, their inclusion in the Conference to present

this subject ಆ ಕಾನ್ಫರೆನ್ಸ್‌ನಲ್ಲಿ ಭಾಗವಹಿಸುವುದಕ್ಕೆ ಅವಕಾಶ ಕೊಟ್ಟಿದ್ದೇ must have come at a time when the Bids had not even been assessed ; they were not even submitted. ಈ ಅಂಶವನ್ನು ನಾವು ಗಮನದಲ್ಲಿಟ್ಟುಕೊಳ್ಳಬೇಕು. ಮಾನ್ಯ ನಂಜೇಗೌಡರು ಹೇಳಿದ ಹಾಗೆ ದಯವಿಟ್ಟು ಸರ್ಕಾರ please don't stand on prestige. ನಾವು ಮಾಡಿದ್ದೇ ಕರೆಕ್ಟ್ ಎನ್ನುವ ಭಾವನೆಗೆ ಬರುವುದು ಬೇಡ. ಅಥವಾ ನಾವು ಹೇಳುತ್ತಿರುವುದು ಕರೆಕ್ಟ್ ಎಂದು ಅನ್ನುವುದು ಬೇಡ. ಇವತ್ತು ಇದನ್ನು ನೋಡುತ್ತಿರುವ ನಗರದ ನಾಗರೀಕರಿಗೆ ಇದರ ವಿಚಾರ ಎಲ್ಲರಿಗೂ ಕೂಡ ಗೊತ್ತಾಗಲಿ. ನಾವು ಮಾತಿಗೆ ಮುಂಚೆ ಅಡ್ಮಿನಿಸ್ಟ್ರೇಷನ್‌ನಲ್ಲಿ ಟ್ರಾನ್ಸ್ಪರೆನ್ಸಿ ಎಂದು ಹೇಳುತ್ತಿದ್ದೇವೆ. ಆ ಮಾತನ್ನು ಮಂತ್ರದ ತರಹ ಉಗುಳುತ್ತಿದ್ದೇವೆ. ಆ ಟ್ರಾನ್ಸ್ಪರೆನ್ಸಿ ಗೊತ್ತಾಗುವುದಕ್ಕೆ ಇದು ಬಹಳ ಉತ್ತಮ ಉದಾಹರಣೆ. ತಾವು ಮುಖ್ಯ ಮಂತ್ರಿಗಳಾಗಿರುವಾಗ ಇಂತಹ ಒಂದು ವ್ಯವಸ್ಥೆಗೆ ಅವಕಾಶ ಮಾಡಿಕೊಡುತ್ತೀರಿ ಎನ್ನುವ ಭಾವನೆಗಳಿಂದ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. Let there be trasnparecncy ನೀವು ಹೇಳುವುದು ಕರೆಕ್ಟೋ ನಾವು ಹೇಳುವುದು ಕರೆಕ್ಟೋ ಪತ್ರಿಕೆಗಳಲ್ಲಿ ಬಂದಿರುವುದು ಕರೆಕ್ಟೋ ಗೊತ್ತಾಗಲಿ. ಏಕೆಂದರೆ ಇದು ಒಂದು ಕೋಟಿ ಎರಡು ಕೋಟಿ ಮೂರು ಕೋಟಿಯದಲ್ಲ. ಮಾನ್ಯ ನಂಜೇಗೌಡರು ಹೇಳಿದಹಾಗೆ ಇನ್ನು 30 ವರ್ಷ 468 ಕೋಟಿ ರೂಪಾಯಿಗಳನ್ನು ಪ್ರತಿ ವರ್ಷ ನಾವು ಕಟ್ಟುತ್ತಾ ಹೋಗಬೇಕು. ಮೊನ್ನೆ ವೀರಪ್ಪಮೊಯಿಲಿಯವರು ಬಜೆಟ್ ಮೇಲೆ ಮಾತನಾಡುತ್ತಾ ಒಂದು ಒಳ್ಳೆಯ ಅಂಶವನ್ನು ಹೇಳಿದರು. ಅಕೌಂಟಬಲಿಟಿ ಅಂದರೇನು ಎಂದು ಅಕೌಂಟಬಲಿಟಿ ಇವತ್ತು ಇರುವ ಜನಕ್ಕೆ ಮಾತ್ರವಲ್ಲ. ಫ್ಯೂಚರ್ ಜನರೇಷನ್‌ಗೂ ಕೂಡ we should be accountable. ಅವರು ಮುಂದೆ ಬಂದು ತೆರಬೇಕು. ಇದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಇವತ್ತು ಕಾವೇರಿ 4ನೇ ಹಂತ ಸೆಕೆಂಡ್ ಫೇಸ್ ಮತ್ತು ಕಾವೇರಿ 5ನೇ ಹಂತ ಇದರ ಅಗತ್ಯ 1999 ರಲ್ಲಿ ಇದೆಯಾ?

11.20 ಎ. ಎಂ.

ಬಹಳ ಮುಖ್ಯ ಎಂದರೆ ಕಾವೇರಿ ನಾಲ್ಕನೇ ಸ್ಟೇಜ್, ಎರಡನೇ ಫೇಸ್ ಇಷ್ಟು ಹೊತ್ತಿಗಾಗಲೇ ಕೆಲಸ ಪ್ರಾರಂಭ ಮಾಡಬೇಕಿತ್ತು. ತಾವು ಹೇಳಿದಹಾಗೆ 2002ನೇ ಇಸವಿಗೆ ಇದನ್ನು ಮುಗಿಸಬೇಕಿತ್ತು. 36 ತಿಂಗಳು ಆಗಿದೆ. ಇದುವರೆಗೂ ನಮ್ಮ ಅಧ್ಯಕ್ಷ ಮಹೋದಯರು ಅಂದರೆ ವಾಟರ್‌ಸಪ್ಲೈ ಅಧ್ಯಕ್ಷ ಮಹೋದಯರು ಟೆಂಡರ್‌ನ್ನು ಅಪ್ರೂವ್ ಮಾಡಿಲ್ಲ, ಫೈನ್‌ಲೈಸ್ ಮಾಡಿಲ್ಲ. ಆದರೆ ಕಾವೇರಿ 4ನೇ ಸ್ಟೇಜ್ 2ನೇ ಫೇಸ್ ಮತ್ತು 5ನೇ ಸ್ಟೇಜ್ ಅನ್ನು ಅಪ್ರೂವ್ ಮಾಡುವ ತರಾತುರಿಯಲ್ಲಿ ಅವರು ಇವತ್ತು ಇದ್ದಾರೆ. ಓ.ಇ.ಸಿ. ಎಫ್. ಬಗ್ಗೆ ಸಾಕಷ್ಟು ಹೇಳಿದ್ದೇವೆ, ಯಾವ ರೀತಿ ಅಪ್ರೀಷಿಯೇಟ್ ಮಾಡಿದ್ದಾರೆ ಎಂದು. ಇದರ ಅಗತ್ಯ ಇರಲಿಲ್ಲ. ಬೆಂಗಳೂರು ವಾಟರ್ ಸಪ್ಲೈ ಬೋರ್ಡ್‌ನ ಇಂಜಿನಿಯರುಗಳು ಏನು ಇದ್ದಾರೆ, they are really capable ಸೆಂಟ್ರಲ್ ಗವರ್ನಮೆಂಟ್‌ನಿಂದ ಹೌಸಿಂಗ್ ಅರ್ಬನ್ ಡೆವಲೆಪ್‌ಮೆಂಟ್‌ನ ಮಿನಿಸ್ಟ್ರಿ ಏನಿದೆ, ಅವರು ಬಿ.ಡಬ್ಲ್ಯೂ. ಎಸ್. ಎಸ್. ಬಿ. ಇಂಜಿನಿಯರುಗಳನ್ನು ಕೇಪಬಲ್ ಎಂದು ಮೆಡಲ್ ಕೊಟ್ಟಿರುವುದನ್ನು ನಾನು ಉಲ್ಲೇಖ ಮಾಡಿದ್ದೇನೆ.

ಫಸ್ಟ್‌ಸ್ಟೇಜ್, ಸೆಕಂಡ್‌ಸ್ಟೇಜ್, ಥರ್ಡ್‌ಸ್ಟೇಜ್ ಈ ಮೂರರ ಬಗ್ಗೆ ನಮ್ಮ ಪರಿಣಿತಿ ಎಲ್ಲರಿಗೂ ಕೂಡ ಗೊತ್ತಿದೆ. ನಮ್ಮದೇ ಡಿಸೈನ್ ಮತ್ತೆ ಸ್ಕೆಚ್ ಇದನ್ನೆಲ್ಲಾ ತೆಗೆದುಕೊಂಡು ಒ. ಇ. ಸಿ. ಎಫ್. ನವರು ಅಪ್ರಿಷಿಯೇಟ್ ಮಾಡುತ್ತಾ ಇರುವುದೂ ಕೂಡ ತಮ್ಮ ಮುಂದೆ ಇದೆ. ಹೀಗಿರುವಾಗ ಆ ಫೋರ್ಥ್ ಸ್ಟೇಜ್, ಫಸ್ಟ್ ಫೇಸ್ ಇನ್ನೂ ಶುರುನೇ ಮಾಡದೇ ಇರುವಾಗ ಫೋರ್ಥ್ ಸ್ಟೇಜ್ ಸೆಕೆಂಡ್ ಫೇಸ್ ಮತ್ತು ಫಿಫ್ತ್ ಸ್ಟೇಜ್ ಮಾಡುವುದಕ್ಕೆ ತರಾತುರಿಯನ್ನು ತೋರಿಸುವುದನ್ನು ಖಂಡಿತವಾಗಿಯೂ ಯಾರೂ ಕೂಡ ಒಪ್ಪುವುದಿಲ್ಲ. ಅದರ ಅಗತ್ಯತೆ ಇಲ್ಲ. ಮುಂದೆ ಸಾಕಷ್ಟು ವಿಚಾರಗಳನ್ನು ಹೇಳಿರುವಾಗ ಟೆಕ್ನಿಕಲ್ ಅಸೆಸ್‌ಮೆಂಟ್ ಪ್ರಕಾರ ಮೂರು ಕಂಪನಿಗಳು ಏನಿದ್ದವು BIWATER ಮತ್ತೆ GVK ಈ ಮೂರು ಸಮಿತಿ ಪ್ರಕಾರ ಟೆಕ್ನಕಲ್ ಅಸೆಸ್‌ಮೆಂಟ್‌ನಲ್ಲಿ Technical assessment was won by BOVIS consortium ಈ ಬೈವಾಟರ್ ಇತಿಹಾಸವನ್ನು ನಾನು ಈಗ ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಅದರದ್ದು ಸಾಕಷ್ಟು ಇತಿಹಾಸ ಇದೆ. It cannot be considered as a company which is capable of participating in this tender. ಅವರದ್ದು ಆನ್ಯುಯಲ್ ಟರ್ನ್‌ಓವರ್ ಇರಬಹುದು. ಯಾವ್ಯಾವ ದೇಶದಲ್ಲಿ ವಾಟರ್‌ಸಪ್ಲೈ ಮಾಡಿದ್ದಾರೆ ಎನ್ನುವುದು ಇರಬಹುದು. ಯಾವುದನ್ನು ಗಣನೆಗೆ ತೆಗೆದುಕೊಂಡರೂ ಕೂಡ they are incapable. They should not have been included ಮೊದಲು ನಮ್ಮ ಸಮಿತಿಯಲ್ಲೂ ತೀರ್ಮಾನ ಆಗಿದೆ. ಸಾವಿರ ಮಾರ್ಕ್ಸ್ ಕೊಡಬೇಕು, ಸಾವಿರ ಮಾರ್ಕ್ಸ್ ಅಸೆಸ್‌ಮೆಂಟ್ ಮಾಡಬೇಕು ಎಂದು ಆಗಿದೆ. ನಮ್ಮ ಜಲಮಂಡಲಿಯ ಅಧ್ಯಕ್ಷರಿಗೆ ಅದು ಏನು ಅನ್ನಿಸಿತೋ, ಬೇಡ 650ಕ್ಕೆ ಮಾತ್ರ ಅಸೆಸ್‌ಮೆಂಟ್ ಮಾಡಿ ಇನ್ನು 350ಕ್ಕೆ ಇಂಟರ್ನಲ್ ಅಸೆಸ್‌ಮೆಂಟ್ ಮಾಡುವುದೆಂದರು. ಪೋಸ್ಟ್ ಗ್ರಾಜ್ಯುಯೇಷನ್‌ನಲ್ಲಿ ಇಂಟರ್ನಲ್ ಅಸೆಸ್‌ಮೆಂಟ್ ಎಂದು ಇರುತ್ತದೆ. ಹಾಗೆ ಇವರು 350 ಮಾರ್ಕ್ಸ್ ನಾವೇ ಕೊಡುತ್ತೇವೆ ಎಂದರು. ಈ 650 ಮಾರ್ಕ್ಸ್ ಮತ್ತು 350 ಎಂದು ಏನು ಡಿವೈಡ್ ಮಾಡಿದರು. ಅದೂ ಕೂಡ ಒರಿಜಿನಲ್ ಅಗ್ರಿಮೆಂಟ್‌ಗೆ ವಿರುದ್ಧವಾದದ್ದು. They had no authority to evaluate for those 350 marks. ಆದರೆ 650 ಮಾರ್ಕ್ಸ್ ಕೊಟ್ಟಾಗ BOVIS Consortium ಗೆದ್ದಿತು. That does not mean that we are pleading for BOVIS ನೀವು ಬೋವೀಸ್‌ಗೆ ಕೊಡಬೇಡಿ. ನನ್ನ ಪ್ರಕಾರ ಅದರ ಅಗತ್ಯವೇ ಇಲ್ಲ. ಇದು ಮತ್ತೆ ಪುನರ್‌ವಿಮರ್ಶೆ ಆಗಬೇಕು. ಎರಡನೆಯದು, ಈ ಟೆಕ್ನಿಕಲ್ ಅಸೆಸ್‌ಮೆಂಟ್ ರಿಪೋರ್ಟ್‌ನ್ನು ಟಾಟಾ ಕನ್ಸಲ್ಟೆನ್ಸಿಯವರು ಏನು ಮಾಡಿದ್ದಾರೆ. ಆ ರಿಪೋರ್ಟಿನ ಪೂರ್ಣ ಪಾಠ, ಅದರ ಚಿತ್ರವನ್ನು ಈ ಸದನದ ಮುಂದೆ ಇಡಬೇಕು. ಅಥವಾ ನಮ್ಮ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಜಂಟಿ ಸದನ ಸಮಿತಿಯನ್ನು ಇಲ್ಲಿ ಮಾಡಬೇಕು. ಏಕೆಂದರೆ ಇದು ಮೇಲಿನ ಸದನದಲ್ಲಿ ಕೂಡ ಭಾರಿ ಚರ್ಚೆಯಾಗಿದೆ. ಜಂಟಿ ಸದನ ಸಮಿತಿ ರೂಪಿಸಿ ಅದರ ಮುಂದೆ ಕೂಡ ಈ ಟೆಕ್ನಿಕಲ್ ಅಸೆಸ್‌ಮೆಂಟ್ ರಿಪೋರ್ಟ್‌ನ್ನು ಪೂರ್ತಿಯಾಗಿ ಇಡಬೇಕು. ಮೂರನೆಯದು, ಟರ್ಮ್ಸ್ ಆಫ್ ರೆಫರೆನ್ಸ್‌ನಲ್ಲಿ ಏನೇನು ಪಾಯಿಂಟ್ಸ್ ಇದ್ದವು. ಅದರಲ್ಲಿ ಇರುವ ಅನೇಕ ಅಂಶಗಳನ್ನು ಈ Biwater Consortium ಅವರು ಮೀಟ್ ಮಾಡಿಲ್ಲ. ತಾವು ಅದಕ್ಕೂ ಕೂಡ ಉತ್ತರವನ್ನು ಕೊಡಬೇಕಾಗುತ್ತದೆ. ಈಗ there

were three assessments. Technical assessment, financial assessment and commercial assessment.

(ಶ್ರೀ ಬಿ. ಬಿ. ಶಿವಪ್ಪನವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಈ ಮೂರು ಅಸೆಸ್‌ಮೆಂಟ್‌ಗಳನ್ನು ಮಾಡಿ ಕೊನೆಯದಾಗಿ 350 ಕೃಪಾಂಕ ಎಂದು ಏನು ಕರೆಯುತ್ತಾರೆ ಗ್ರೇಸ್ ಮಾರ್ಕ್ಸ್, ಫೈಲ್ ಆದವರಿಗೆ ಪಾಸ್ ಮಾಡುವುದಕ್ಕೆ ಈ ರೀತಿ ಕೃಪಾಂಕದ ತರಹ 350 ಅಂಕಗಳನ್ನು ಜಾಸ್ತಿ ಕೊಟ್ಟು ಫೈಲ್ ಆದ ವಿದ್ಯಾರ್ಥಿಯನ್ನು ಫಸ್ಟ್ ರ್‍ಯಾಂಕ್ ಬರುವ ಹಾಗೆ ಮಾಡಿ ಬೆಂಗಳೂರು ನಗರದ ನಾಗರೀಕರ ಮೇಲೆ ಇವತ್ತು ದೊಡ್ಡ ಹೊರೆ ಹೊರಿಸುವುದಕ್ಕೆ ಜಲಮಂಡಲಿ ಹೊರಟಿದೆ. ನಮಗೆ ಇರುವ ಅಲ್ಪಾವಧಿಯಲ್ಲಿ ನಾವು ಮಾಡುತ್ತೇವೆ ಎನ್ನುವ ಒಂದು ದಾಷ್ಟ್ರ್ಯತನವನ್ನು ತೋರಿಸದೆ ಈ ಅಂಶವನ್ನು ಕೂಡ ತಾವು ಗಮನದಲ್ಲಿಟ್ಟುಕೊಂಡು ಮುಂದೆ ಬರುವ ಜನರೇಷನ್‌ನ್ನೂ ಕೂಡ ಜ್ಞಾಪಕದಲ್ಲಿ ಇಟ್ಟುಕೊಂಡು ಈ ಕೆಲಸವನ್ನು ಮಾಡಬೇಕಾಗಿದೆ. ಇವತ್ತು ಬೆಂಗಳೂರು ನಗರದಲ್ಲಿ ಜನರು ಕೊಡುತ್ತಿರುವ ನೀರಿನ ದರ ಏನು? 25 ಸಾವಿರ ಲೀಟರ್‌ವರೆಗೆ ಒಂದು ಕಿಲೋ ಲೀಟರ್‌ಗೆ ಮೂರುವರೆ ರೂಪಾಯಿ. 25 ರಿಂದ 50 ಸಾವಿರ ಲೀಟರ್‌ವರೆಗೆ ಪರ್ ಕಿಲೋ ಲೀಟರ್‌ಗೆ 7 ರೂಪಾಯಿ. 50 ಸಾವಿರದಿಂದ 75 ಸಾವಿರವರೆಗೆ ಪರ್ ಕಿಲೋಲೀಟರ್‌ಗೆ 19 ರೂಪಾಯಿ. 75 ಸಾವಿರದಿಂದ 1 ಲಕ್ಷದವರೆಗೆ ಪರ್ ಕಿಲೋಲೀಟರ್‌ಗೆ 25 ರೂಪಾಯಿ. ಬೈವಾಟರ್ ನವರು ಚಾರ್ಜ್ ಮಾಡುವುದು 26 ರೂಪಾಯಿ ಪರ್ ಕಿಲೋಲೀಟರ್. ಬೋವೀಸ್‌ನವರು 17 ರೂಪಾಯಿ 93 ಪೈಸೆ ಪರ್ ಕಿಲೋಲೀಟರ್. ಸಿ.ಜಿ.ಇ. ಯವನದ್ದು 14 ರೂಪಾಯಿ 55 ಪೈಸೆ ಪರ್ ಕಿಲೋ ಲೀಟರ್‌ಗೆ. ಇವತ್ತು ಸಾಮಾನ್ಯವಾದ ಒಂದು ಕುಟುಂಬ 70 ರಿಂದ 80 ರೂಪಾಯಿ ಕೊಡುತ್ತಾ ಇದ್ದರೆ ಅವರು ಮುಂದೆ ಈ ಪ್ರಾಜೆಕ್ಟ್ ಬಂದಾಕ್ಷಣ ಸುಮಾರು 900 ರೂಪಾಯಿ ಒಂದು ತಿಂಗಳಿಗೆ ನೀರಿನ ದರವನ್ನು ಕಟ್ಟಬೇಕು. ಇದನ್ನು ಮಿನಿಮಮ್ ವೇಜಸ್ ಆ್ಯಕ್ಟ್ ಕೆಳಗಡೆ ಸಂಬಳ ತೆಗೆದುಕೊಳ್ಳುವವನಿಗೂ ಕೊಡುವುದಕ್ಕೆ ಆಗುವುದಿಲ್ಲ. ಅವನು ಪೂರ್ತಿ ಸಂಬಳವನ್ನು ಇದಕ್ಕಾಗಿ ಕೊಡಬೇಕಾಗುತ್ತದೆ. ಇದು ಸಾಧ್ಯವೇನು? ನಮ್ಮಂಥ ದೇಶಕ್ಕೆ, ನಮ್ಮಂಥ ಒಂದು ಸಮಾಜಕ್ಕೆ ಈ ರೀತಿ 26 ರೂಪಾಯಿ ಪರ್ ಕಿಲೋಲೀಟರ್‌ಗೆ ನೀರು ತೆಗೆದುಕೊಂಡು ನೀವು ಈ ಯೋಜನೆ ಏನಿದೆ ಇದನ್ನು ಕೊಡುವುದಕ್ಕೆ ಸಾಧ್ಯವಿದೆಯಾ ? ಇದು ಯಾವ ಸ್ಥಿತಿಗೆ ಬರುತ್ತದೆ ಎಂದರೆ ಕರ್ನಾಟಕ ಪವರ್ ಕಾರ್ಪೊರೇಷನ್‌ನ ವಿದ್ಯುತ್ ಉತ್ಪಾದನೆ ವೆಚ್ಚವನ್ನು ಕೆ.ಇ.ಬಿ. ಯವರು ಕೊಡುವುದಕ್ಕಿಂತ ಜಾಸ್ತಿಯಾದದ್ದು. ಆ ಒಂದು ಪರಿಸ್ಥಿತಿ ಇವೊತ್ತು ಬರುತ್ತಿದೆ. ಇವತ್ತು ದರ ಏನು ಫಿಕ್ಸ್ ಮಾಡಿದ್ದಾರೆ ಅದರಲ್ಲಿ 30ಪರ್ಸೆಂಟ್ sanitary Maintenance Cess ಕೂಡ ಸೇರಿದೆ. ಆದರೆ 26 ರೂಪಾಯಿಯಲ್ಲಿ ಇದು ಸೇರುವುದಿಲ್ಲ. ಆಮೇಲೆ 2002ಕ್ಕೆ ಫಸ್ಟ್ ಸ್ಟೇಜ್‌ನ್ನು ಮುಗಿಸಬೇಕಿತ್ತು. ಆ ಫಸ್ಟ್ ಫೇಸ್‌ನದ್ದು ಲ್ಯಾಂಡ್ ಅಕ್ವಿಸಿಷನ್ ಇದುವರೆಗೂ ಕೂಡ ಮುಗಿದಿಲ್ಲ. ಅದೂ ಕೂಡ ಇನ್ನೂ ತರಾತುರಿಯಲ್ಲಿ ನಡೆಯುತ್ತಿದೆ. ಕಾವೇರಿ ಫೋರ್ಥ್ ಸ್ಟೇಜ್ ಫಸ್ಟ್ ಫೇಸ್‌ಗೆ ಕ್ಲಿಯರೆನ್ಸ್ ಕೊಟ್ಟು ಮೂರು ವರ್ಷವಾಯಿತು. ಇದುವರೆಗೂ ಕೂಡ ಟೆಂಡರ್ ಫೈನಲೈಸ್ ಆಗಿಲ್ಲ. ನನಗನ್ನಿಸುವ ಪ್ರಕಾರ ಅದನ್ನು ಫೈನಲೈಸ್ ಮಾಡದೇನೇ ಸೆಕೆಂಡ್ ಫೇಸ್ ಮತ್ತು ಫಿಫ್ತ್ ಸ್ಟೇಜ್‌ನ ಅದರ ಅಡಿಯಲ್ಲೇ

ಫೋರ್ಥ್ ಸ್ಟೇಜ್ ಫಸ್ಟ್ ಫೇಸನ್ನು ಬೂಟ್ ಸಿಸ್ಟಮ್‌ನಲ್ಲಿ ಕೊಡುವ ಒಂದು ಹುನ್ನಾರ ಇವತ್ತು ಬಿ.ಡಬ್ಲ್ಯೂ.ಎಸ್. ಎಸ್.ಬಿ. ಯಲ್ಲಿ ನಡೆಯುತ್ತಿದೆ. ಕ್ಯಾಬಿನೆಟ್ ಅಪ್ರೂವಲ್ ಕೊಟ್ಟು ಮೂರು ವರ್ಷ ಆದರೂ ಕೂಡ ಆ ಟೆಂಡರ್ ಫೈನಲೈಸ್ ಮಾಡದೇ ಇದ್ದ ಜನ ಈ ಫೋರ್ಥ ಸ್ಟೇಜ್ ಸೆಕೆಂಡ್ ಫೇಸ್‌ಗೆ ತರಾತುರಿಯನ್ನು ತೋರಿಸುತ್ತಾ ಇರುವುದಕ್ಕೆ ಇದು ಒಂದು ನಿದರ್ಶನ. ಆಮೇಲೆ 13-3-97, 27-3-97 ಮತ್ತು 21-5-97ರಲ್ಲಿ ಈ ಮೂರು ಪತ್ರಗಳನ್ನು ಆ ಬೆಂಗಳೂರು ವಾಟರ್ ಸಪ್ಲೈಬೋರ್ಡ್ ಚೇರ್ಮನ್ ಅವರು ಬರೆಯುತ್ತಾರೆ. ಆ ಮೂರು ಪತ್ರಗಳಲ್ಲೂ 'ಬೈವಾಟರ್‌ಗೇ ಇದನ್ನು ಕೊಡಿ' ಎಂದು ಎರಡು ವರ್ಷಗಳಿಗೆ ಮುಂಚೆಯೇ ಅವರು ಪತ್ರ ಬರೆಯುತ್ತಾರೆ. How much predetermined this thing is ಎನ್ನುವುದು ಗೊತ್ತಾಗುತ್ತದೆ. ಎರಡು ವರ್ಷಗಳ ಮುಂಚೆ ಟೆಂಡರ್ ಕರೆದಿರಲಿಲ್ಲ, ನಮಗೆ ಯಾರಿಗೂ ಕೂಡ ಗೊತ್ತಿರಲಿಲ್ಲ. ಆದರೂ ಬೈವಾಟರ್‌ಗೆ ಕೊಟ್ಟು ಬಿಡೋಣ ಎಂದು ಬರೆದಿದ್ದಾರೆ. I don't know whether it is 'BIWATER OR BUY WATER' ಮಾಡುವುದಕ್ಕೆ ಇವತ್ತು ಹೊರಟಿದ್ದಾರೆ. ಆಮೇಲೆ ಬಹಳ ಮುಖ್ಯವಾಗಿ Apart from cost and other things. ಇನ್ನು ಮೂವತ್ತು ವರ್ಷ 468 ಕೋಟಿ ರೂಪಾಯಿಗಳನ್ನು ಕೊಡುವುದು. ಬೆಂಗಳೂರು ನಗರ ಕಾರ್ಪೊರೇಷನ್ ಬಜೆಟ್ ಬಗ್ಗೆ ಹೇಳಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್ ಇಷ್ಟೆಲ್ಲಾ ವರ್ಷಗಳಾದರೂ ಕೂಡ, ನಮ್ಮ ಟ್ಯಾಕ್ಸ್ ಕಲೆಕ್ಷನ್ ಇರಬಹುದು, ಬೇರೆ ಬೇರೆ ಇರಬಹುದು, ಆದರೂ ಅದರ ಬಜೆಟ್ 400 ಕೋಟಿ ರೂಪಾಯಿಗಳು ದಾಟುವುದು ಕಷ್ಟವಾಗುತ್ತದೆ. ಇಷ್ಟು ದುಡ್ಡನ್ನು ಇನ್ನು ಮೂವತ್ತು ವರ್ಷ ಈ ಬೈವಾಟರ್‌ನವರಿಗೆ ಅರ್ಪಿಸಬೇಕು. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಏನೆಂದರೆ ದಯವಿಟ್ಟು ಈ ಬೈವಾಟರ್ ಪ್ರಹಸನ ಏನಿದೆ, ಇದನ್ನು ಬೆಂಗಳೂರು ನಗರದ ನಾಗರೀಕರ ಹಿತದೃಷ್ಟಿಯಿಂದ ಕೈಬಿಡಿ. ಇದನ್ನು ಮಾಡಲೇಬೇಕೆಂದು ನಿಮ್ಮ ತೀರ್ಮಾನವಾದರೆ - to make it more transparent ಇಲ್ಲ. ನಾವು ತಪ್ಪು ಏನೂ ಮಾಡಿಲ್ಲವೆಂದು ವಿಶ್ವಾಸ ಇದ್ದರೆ ಸದನ ಸಮಿತಿ ರಚಿಸಿ ಅದರ ಮುಂದಿಡಿ. ಜನರಿಗೆಲ್ಲಾ ಗೊತ್ತಾಗಲಿ. ಇದ್ದಕ್ಕಿದ್ದ ಹಾಗೆ 270 ಕೋಟಿ ರೂಪಾಯಿನಲ್ಲಿ ತಂದ ಸ್ಕೀಮಿಗೆ ಇವತ್ತು ಇಷ್ಟೊಂದು 1,300 ಕೋಟಿ ರೂಪಾಯಿಗಳನ್ನು ಕೊಡುವುದು ಯಾರಿಗೂ ಕೂಡ ಅರ್ಥವಾಗದ ವಿಚಾರ. ನನ್ನ ಹತ್ತಿರ ಒಂದು ನೋಟ್ ಇದೆ. "M/s. Tata Consultancy Services were appointed as consultants for evaluating the offers of all the three firms namely BOVIS, BIWATER and CGE. The total marks allocated for various categories as per the notification being 1,000. Tata consultancy Service have evaluated the offer only for 650 marks. For evaluating the remaining 350 marks, the BWSSB appointed an in-House committee. Where as TATA consultancy service have given the highest marks of 548,45 to BOVIS, 528.58 marks II to Biwater out of the allocated 650 marks for Technical, financial and commercial aspects, the In-House Committee of BWSSB has given 177.51 marks to BOVIS and 228.9 marks to Biwater for BOOT experience and O AND M experience.."

"The inexplicable high marks given by the in-house committee to Biwater has made the firm Biwater to secure the highest marks in the overall position pushing Bowis to second position. If, as per notification, Tata Consultancy Service had to evaluate the offer for all the 1,000 marks withdrawing the aspect of BOOT experience and O & M experience from them and entrusting the same to the in-house committee of the Board would become irregular." ಅದಕ್ಕೂ ಕೂಡ ಯಾವುದೇ ಪರ್ಮಿಷನ್ ತೆಗೆದುಕೊಂಡಿಲ್ಲ. ಈ ಎಲ್ಲಾ ಅಂಶಗಳನ್ನೂ ನೋಡಿದಾಗ, ಬೈವಾಟರ್‌ಗೆ ಈ ಯೋಜನೆಯನ್ನು ಕೊಡುವುದು ಯಾವುದೇ ರೀತಿಯಿಂದಲೂ ನ್ಯಾಯಸಮ್ಮತ ಅಲ್ಲ. ಬೆಂಗಳೂರು ನಾಗರೀಕರಿಗೆ ಇದು ಒಳಿತಲ್ಲ. ಒಂದು ರೀತಿಯಿಂದ ಬೆಂಗಳೂರು ನಾಗರೀಕರ ಮೇಲೆ ನೀವು ಹೂಡುತ್ತಿರುವ ಬಹಳ ದೊಡ್ಡ ಆಟ. You will be mortgaging the Bangalore citizens for 30 years to this Biwater.

(ಅಧ್ಯಕ್ಷರು (ಶ್ರೀ ರಮೇಶ್ ಕುಮಾರ್‌ರವರು) ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು.)

ನಾನು ಅದಕ್ಕೇ ಹೇಳಿದ್ದು : It is a new East India Company. ಮತ್ತೊಂದು ಸಲ ದಾಸರಾಗುವುದಕ್ಕೆ ಸಿದ್ಧರಿಲ್ಲ. ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಮತ್ತೊಂದು ಸಲ ಎಂದಿನಂತೆ ಇದನ್ನೂ ತೇಲಿಸದೆ ತಾವು ದಯವಿಟ್ಟು ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಸದನಕ್ಕೆ ಸತ್ಯಾಂಶವನ್ನು ಇಡಬೇಕು. ಎಲ್ಲರೂ ಹೇಳುವ ರೀತಿಯಲ್ಲಿ ಕಾವೇರಿ 4ನೇ ಸ್ಟೇಜ್, 5ನೇ ಸ್ಟೇಜ್ ಅಗತ್ಯ ಇಲ್ಲ. ಮೊದಲು ನಾವು ಫಸ್ಟ್ ಸ್ಟೇಜ್ ಪೂರ್ಣ ಮಾಡೋಣ. ಅದನ್ನೂ ಕೂಡ ಒ ಎ ಸಿ ಎಫ್‌ನವರನ್ನು ಮತ್ತೆ ಪುನರ್ ಪರಿಶೀಲನೆ ಮಾಡಿ, ಇದಕ್ಕೆ 300 ಕೋಟಿ ಇದ್ದುದ್ದು, 1032 ಕೋಟಿ ರೂಪಾಯಿ ಆಗಿದ್ದು ಏಕೆ? ಇದರ ಅಗತ್ಯ ಇತ್ತೇ ? ಏಕೆಂದರೆ ನಮ್ಮದೇ ಡಿಸೈನ್, ಎಲ್ಲವೂ ನಮ್ಮದೇ, ಹೀಗಿರುವಾಗ ಏಕೆ ಇಷ್ಟವಾಯಿತು ? ಇದನ್ನೂ ಪುನರ್ ವಿಮರ್ಶೆಮಾಡಿ ಬೆಂಗಳೂರು ನಾಗರೀಕರಿಗೆ ತಮ್ಮ ಅಧಿಕಾರಾವಧಿ ಕೊನೆಗೊಳ್ಳುತ್ತಾ ಬರುತ್ತಿರುವಾಗ, ಈ ಒಂದು ದೊಡ್ಡ ಕಷ್ಟವನ್ನು, ದೊಡ್ಡ ಭಾರವನ್ನು ದಯವಿಟ್ಟು ಹೇರಬೇಡಿ ಎಂದು ಮತ್ತೊಮ್ಮೆ ನಿಮ್ಮಲ್ಲಿ ಮನವಿ ಮಾಡಿಕೊಂಡು, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಸೋಮಣ್ಣ (ಬೆಂಗಳೂರು ನಗರಾಭಿವೃದ್ಧಿ ಮಂತ್ರಿಗಳು): ಸನ್ಮಾನ್ಯ ಸಭಾಧ್ಯಕ್ಷರೇ, ಈಗಗಾಲೇ ಗೌರವಾನ್ವಿತ ವಿರೋಧ ಪಕ್ಷದ ನಾಯಕರು, ಹಿರಿಯರಾದ ನಂಜೇಗೌಡರು, ಮಿತ್ರರಾದ ಸುರೇಶ್ ಕುಮಾರ್‌ರವರು ಬೆಂಗಳೂರು ನಗರಕ್ಕೆ ನೀರು ತರತಕ್ಕಂಥ ವ್ಯವಸ್ಥೆಯಲ್ಲಿ ಅನೇಕ ಲೋಪದೋಷಗಳಾಗಿವೆ, ಇದನ್ನು ಏತಕ್ಕೋಸ್ಕರ ತರಬೇಕಾಗಿತ್ತು, ಈ ನಗರದ ಜನಸಂಖ್ಯೆ ಅಷ್ಟೊಂದು ಇದೆಯೇ ಇತ್ಯಾದಿ ವಿಚಾರಗಳ ಬಗ್ಗೆ ಮಾತನಾಡಿದ್ದಾರೆ. ಮತ್ತು ಈ ನಗರಕ್ಕೆ ಆಗಬೇಕಾಗಿರತಕ್ಕಂತಾದ್ದರ ಬಗ್ಗೆ ನಿಮಗೇಕೆ ಇಷ್ಟೊಂದು ಕಳಕಳಿ ಎನ್ನುವ ಕೆಲವು ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ಬೆಂಗಳೂರು ನಗರಕ್ಕೆ 1993ರ ವರೆಗೆ 9.5 ಟಿ. ಎಂ. ಸಿ. ನೀರನ್ನು ಕಾವೇರಿಯಿಂದ ತರುವುದಕ್ಕೆ ಪ್ರಾವಿಷನ್ ಇತ್ತು. ಅದರಲ್ಲಿ, ಮೊದಲನೇ ಹಂತವಾಗಿ 2 ಟಿ. ಎಂ. ಸಿ., 2ನೇ ಹಂತವಾಗಿ 2 ಟಿ. ಎಂ. ಸಿ., 3ನೇ

ಹಂತವಾಗಿ 4 ಟಿ. ಎಂ. ಸಿ. ಹೀಗೆ ಒಟ್ಟು 8 ಟಿ. ಎಂ. ಸಿ. ನೀರನ್ನು 1993ರ ಒಳಗಡೆಗೆ ಬೆಂಗಳೂರು ನಗರಕ್ಕೆ ತಂದೆವು. ಅದಾದ ಮೇಲೆ ರಾಷ್ಟ್ರೀಯ ಜಲನೀತಿಯ ಸಂಬಂಧವಾಗಿ 1995ರ ಮೇ ನಲ್ಲಿ ಮತ್ತೆ 9.5 ಟಿ. ಎಂ. ಸಿ. ನೀರನ್ನು ಬೆಳೆಯುತ್ತಿರತಕ್ಕ ಬೆಂಗಳೂರು ನಗರವನ್ನು ಮತ್ತು ಈ ನಗರಕ್ಕೆ ಬೇರೆ ಬೇರೆ ದೇಶಗಳಿಂದ ಬರುತ್ತಿರುವ ಅನೇಕ ಕೈಗಾರಿಕೆಗಳನ್ನು , ಮತ್ತೊಂದನ್ನು ಗಮನದಲ್ಲಿಟ್ಟು ಕೊಂಡು ಒಟ್ಟು 19 ಟಿ. ಎಂ. ಸಿ. ನೀರನ್ನು ಬೆಂಗಳೂರು ನಗರಕ್ಕೆ ತರುವುದಕ್ಕೆ ಜಲನೀತಿಯಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟರು. ಅದಾದಮೇಲೆ ಬೆಂಗಳೂರು ನಗರಕ್ಕೆ ನೀರಿನ ವ್ಯವಸ್ಥೆಯಾಗಬೇಕಾಗಿದೆ, ಈ ನಗರದಲ್ಲಿ ಸುಮಾರು 9 ಲಕ್ಷಕ್ಕೂ ಮೇಲ್ಪಟ್ಟು ಮನೆಗಳು ಇದ್ದರೂ ಕೂಡ ಈ ತಹಲ್‌ವರೆಗೂ ಬೆಂಗಳೂರು ನಗರದಲ್ಲಿರತಕ್ಕಂಥ 3 ಲಕ್ಷ ಗ್ರಾಹಕರಿಗೆ ಮಾತ್ರ ನೀರನ್ನು ಕೊಡುವುದರಲ್ಲಿ ನಾವು ಸಫಲತೆಯನ್ನು ಕಂಡಿದ್ದೇವೆ. ಅದಕ್ಕೋಸ್ಕರವಾಗಿ ಬೆಂಗಳೂರು ನಗರಕ್ಕೆ 4ನೇ ಹಂತದ ಮೊದಲನೇ ಯೋಜನೆಯನ್ನು ಕೈಗೆತ್ತಿಕೊಂಡು, ಜಪಾನ್‌ನವರ ನೆರವಿನಿಂದ ಓ. ಎಸ್. ಎಫ್ ನಲ್ಲಿ ಹಣವನ್ನು ನಾವು ಸಾಲವಾಗಿ ಪಡೆದು. ಬೆಂಗಳೂರು ಜಲಮಂಡಳಿ ಈ ಕಾರ್ಯವನ್ನು ಮಾಡುವುದಕ್ಕೆ ಈಗಾಗಲೇ ಕಾರ್ಯೋನ್ಮುಖವಾಗಿದೆ. ಇದರಿಂದ ಬರತಕ್ಕಂಥ ಒಟ್ಟು 11 ಟಿ. ಎಂ. ಸಿ. ಯಲ್ಲಿ 4 ಟಿ. ಎಂ. ಸಿ ನೀರನ್ನು 4ನೇ ಹಂತದ ಒಂದನೇ ಘಟ್ಟದಲ್ಲಿ ನಾವು ಈಗಾಗಲೇ ಕಾರ್ಯಾರಂಭ ಮಾಡಿದ್ದೇವೆ. ಇದಕ್ಕೆ ತಗಲತಕ್ಕ ವೆಚ್ಚವನ್ನು ಈಗಾಗಲೇ ಗೌರವಾನ್ವಿತ ಸದಸ್ಯರು ಹೇಳಿದ್ದಾರೆ. 1072 ಕೋಟಿ ರೂಪಾಯಿಗಳಾಗಬಹುದು. ಈ ಹಣದಲ್ಲಿ ನಾವು ಬೆಂಗಳೂರು ನಗರಕ್ಕೆ ನೀರು ತರತಕ್ಕಂತಾದ್ದಕ್ಕೆ ಈಗಾಗಲೇ ಲ್ಯಾಂಡ್ ಅಕ್ವಿಸಿಷನ್ ಸುಮಾರು 85 ಭಾಗ ಮುಗಿಸಿದ್ದೇವೆ. ನಗರದಲ್ಲಿ ಮಾತ್ರ ಕೆಲವು ಕಡೆಗಳಲ್ಲಿ ನಾವು ಲ್ಯಾಂಡ್ ಅಕ್ವಿಸಿಷನ್ ಮಾಡಬೇಕಾಗಿದೆ. ಉಳಿದಿರತಕ್ಕಂಥ ಭಾಗಗಳಲ್ಲಿ ಲ್ಯಾಂಡ್ ಅಕ್ವಿಸಿಷನ್ ಮಾಡಿಕೊಂಡಿದ್ದೇವೆ. ಮತ್ತು ಲ್ಯಾಂಡನ್ನೂ ಕೂಡ ಸುಬರ್ದಿಗೆ ಪಡೆದಿದ್ದೇವೆ. ಟ್ರೀಟ್‌ಮೆಂಟ್ ಪ್ಲಾಂಟನ್ನೂ ಕೂಡ ನಾವು ಪ್ರಾರಂಭ ಮಾಡಿದ್ದೇವೆ. ಅದಲ್ಲದೆ, ಉಳಿದಿರತಕ್ಕಂಥ ಕೆಲವು ಟೆಂಡರುಗಳನ್ನು ಈಗಾಗಲೇ ಫೈನಲ್ ಮಾಡಿ, ಈ ತಿಂಗಳು 25ನೇ ತಾರೀಖಿನೊಳಗೆ ಲೈನುಗಳನ್ನು ಲೇಯಿಂಗ್ ಮಾಡುವುದಕ್ಕೆ ನಾವು ಈಗಾಗಲೇ ದಿನಾಂಕವನ್ನು ಕೂಡ ಗೊತ್ತುಪಡಿಸಿದ್ದೇವೆ. ನಮ್ಮ ಉದ್ದೇಶ ಈವತ್ತು ಏನು ಬೆಂಗಳೂರು ನಗರ ಬೆಳೆಯುತ್ತಿದೆ, ಇದನ್ನು ಮನಗಂಡು, 4ನೇ ಹಂತದ ಮೊದಲನೇ ಯೋಜನೆ ಏನಿದೆ, ಇದು 2002ನೇ ಇಸವಿ ಮೊದಲನೇ ಭಾಗದಲ್ಲಿ ಆಗಬೇಕು. 2001ನೇ ಡಿಸೆಂಬರ್ ಒಳಗಡೆ ಇದನ್ನು ಮಾಡಿ, ಬೆಂಗಳೂರು ನಗರಕ್ಕೆ ಸುಮಾರು 4 ಟಿ.ಎಂ.ಸಿ. ನೀರನ್ನು ಅಂದರೆ, 270 ಎಂ.ಎಲ್.ಡಿ ನೀರನ್ನು ಕೊಡಬೇಕೆನ್ನುವ ಒಂದು ಯೋಜನೆ ಇತ್ತು.

ಶ್ರೀ ಎಸ್. ಸುರೇಶ್ ಕುಮಾರ್ : ಅದು ಟೆಂಡರ್ ಕರೆದಿದ್ದು ಯಾವಾಗ ?

ಶ್ರೀ ವಿ. ಸೋಮಣ್ಣ : ಫಸ್ಟ್ ಫೇಸ್‌ಗೆ ಟೆಂಡರ್ ಕರೆದು ಈಗಾಗಲೇ ಕೆಲವು ಕೆಲಸಗಳು ಪ್ರಾರಂಭವಾಗಿದೆ. 1995ರಲ್ಲಿ ನಾವು ಈ ಯೋಜನೆಯನ್ನು ಕೈಗೆತ್ತಿಕೊಂಡಾಗ, 1300 ಕೋಟಿ ರೂಪಾಯಿಗೂ ಮೇಲ್ಪಟ್ಟು ಒಂದು ಎಸ್ಟಿಮೇಟ್ ಮಾಡಿದ ಮೇಲೆ, 1995-96ರಲ್ಲಿ ನಮ್ಮ ಸರ್ಕಾರವೇ ಒಂದು ಕಮಿಟಿಯನ್ನು ನೇಮಕ ಮಾಡಿತ್ತು. ಹಿರಿಯರಾಗಿದ್ದಂಥ, ಬೆಂಗಳೂರು ಜಲಮಂಡಳಿಯಲ್ಲಿ

ಕೆಲಸ ಮಾಡಿದಂಥ ತ್ಯಾಗರಾಜ, ಗುಲಾಮ್ ಅಹಮದ್ ಮತ್ತು ಕೆ. ಸಿ. ರೆಡ್ಡಿಯವರ ಮೂರು ಜನರ ಸಮಿತಿಯನ್ನು ಮಾಡಲಾಗಿತ್ತು. ಆ ಸಮಿತಿಯು, ಅದರ ಆಗುಹೋಗುಗಳನ್ನು ಪರಿಶೀಲನೆ ಮಾಡಿ 1072 ಕೋಟಿ ರೂಪಾಯಿಗಳಿಗೆ ಈ ಕೆಲಸವನ್ನು ತೆಗೆದುಕೊಳ್ಳಬೇಕೆಂಬ ಒಂದು ಅಂದಾಜಿನ ಮೇರೆಗೆ 1996-97ರಲ್ಲಿ ಟೆಂಡರನ್ನು ಕರೆದರು. ಇದೆಲ್ಲಾ ತೀರ್ಮಾನವಾಗಿ ಒ.ಎ.ಸಿ.ಎಫ್. ನ ಲೋನ್ ತೆಗೆದುಕೊಳ್ಳಬೇಕಾದರೆ, ಕನ್ಸಲ್ಟೆನ್ಸಿಯಿಂದ, ಮತ್ತೆ ಕಾನೂನು ಚೌಕಟ್ಟಿನಲ್ಲಿ ಪ್ರತಿಯೊಂದನ್ನೂ ಮಾಡಬೇಕಾಯಿತು. ಒ.ಎ.ಸಿ.ಎಫ್. ನವರು ಕನ್ಸಲ್ಟೆನ್ಸಿ ಇಲ್ಲದೆ ಮಾಡಕೂಡದು ಎನ್ನುವ ಒಂದು ನಿಬಂಧನೆಯನ್ನು ಮಾಡಿದ್ದರಿಂದ, ಸುಮಾರು 38 ಕೋಟಿ ರೂಪಾಯಿ, ಅವರ ತೆರಿಗೆ ಮತ್ತೊಂದು ಎಲ್ಲಾ ಸೇರಿ 41 ಕೋಟಿ ರೂಪಾಯಿಗಳನ್ನು ನಾವು ಸರ್ಕಾರದಲ್ಲಿ ಆ ಲೋನನ್ನು ತೆಗೆಯಬೇಕಾಗಿರುವುದರಿಂದ, ಕೇಂದ್ರ ಸರ್ಕಾರದವರ ಅನುಮತಿಯನ್ನು ಪಡೆಯಬೇಕಾಗಿದ್ದರಿಂದ, ಅವರ ಸೂಚನೆಯ ಮೇರೆಗೆ ನಾವು ಅದನ್ನು ಪಡೆದಿದ್ದೆವು. ಅದಾದ ಮೇಲೆ ನಾವು ಇವತ್ತು ಕೆಲಸ ಕಾರ್ಯಗಳನ್ನು ಪ್ರಾರಂಭ ಮಾಡುತ್ತಿದ್ದೇವೆ. ಇಷ್ಟಾದರೂ ಕೂಡ, ಅಂದರೆ 4ನೇ ಹಂತದ ಮೊದಲನೇ ಯೋಜನೆ ಬಂದರೂ ಕೂಡ ಬೆಂಗಳೂರು ನಗರಕ್ಕೆ ಕಾವೇರಿಯಿಂದ ಬರತಕ್ಕಂತಾದ್ದು ಕೇವಲ 800 ಎಂ. ಎಲ್. ಡಿ. ನೀರು. ಇನ್ನು 500 ಎಂ. ಎಲ್. ಡಿ ನೀರನ್ನು ತರಬೇಕೆಂಬ ಉದ್ದೇಶ ಇಟ್ಟುಕೊಂಡು, ಇದೇನು 2001ನೇ ಇಸವಿ ಡಿಸೆಂಬರ್‌ಗೆ ಮುಗಿಯುತ್ತದೆ, ಇವತ್ತು 19 ಟಿ. ಎಂ. ಸಿ. ನೀರನ್ನು ತೆಗೆದುಕೊಳ್ಳಬೇಕಾದಂಥ ಒಂದು ಅವಶ್ಯಕತೆ ಇದೆ ಎನ್ನುವುದನ್ನು ಅರಿತುಕೊಂಡು ಮತ್ತೆ ನಾವು 4ನೇ ಹಂತದ 2ನೇ ಯೋಜನೆಯನ್ನು ಕಾರ್ಯಾರಂಭ ಮಾಡುವುದಕ್ಕೆ ನಾವು ಒಂದು ಬಿಡ್‌ನ್ನು ಕರೆದೆವು. ಅದಕ್ಕೆ ಸುಮಾರು 13ಜನ ಅಪ್ಲಿಕೇಷನ್ ತೆಗೆದುಕೊಂಡರು. 8 ಜನರು ಆ ಬಿಡ್‌ನಲ್ಲಿ ಭಾಗವಹಿಸಿದರು. ತದನಂತರ, ಅದರಲ್ಲಿ ಕೇವಲ ಮೂರು ಜನ ಮಾತ್ರ ಬಂದರು. ಈ ಮೂರು ಜನ ಯಾರು ಎಂಬುದರ ಬಗ್ಗೆ ನಾನು ಸವಿಸ್ತಾರವಾಗಿ ತಮಗೆ ತಿಳಿಸುತ್ತೇನೆ. ನಮ್ಮ ಉದ್ದೇಶವಾದರೂ ಇಷ್ಟೆ. ಯಾವ ನಗರದಲ್ಲಿ ಇವತ್ತು ಪ್ರಾಯಶಃ ಬೆಂಗಳೂರು ಮೆಟ್ರೋಪಾಲಿಟನ್ ಸಿಟಿಯಾದ ಮೇಲೆ, ಬೆಂಗಳೂರು ನಗರಕ್ಕೆ ಸಂಬಂಧಪಟ್ಟ ಹಾಗೆ, ಏನು ಇವತ್ತು ಬೌಂಡರಿಗಳನ್ನು ಮಾಡಿದ್ದೇವೆ, ಅದು ಆನೇಕಲ್ ಇರಬಹುದು ಮತ್ತೆ ಉತ್ತರಹಳ್ಳಿ ಇರಬಹುದು ಯಲಹಂಕ ಇರಬಹುದು. ಈ ಪ್ರದೇಶಗಳೆಲ್ಲವನ್ನೂ ಕೂಡ ಈಗಾಗಲೇ ಬೆಂಗಳೂರು ನಗರದ ಸರಹದ್ದು ಎಂದು ತೀರ್ಮಾನ ಮಾಡಿ, ಲಕ್ಷಾಂತರ ಜನರಿಗೆ ನೀರು ಕೊಡತಕ್ಕ ನಿಟ್ಟಿನಲ್ಲಿ ಬೆಳೆಯುತ್ತಿರತಕ್ಕ ಈ ನಗರಕ್ಕೆ ನೀರು ಕೊಡಲು, ನಾವು ಯಾವರೀತಿಯಲ್ಲಿ ಕಾರ್ಯರೂಪ ತೆಗೆದುಕೊಳ್ಳಬೇಕು ಮತ್ತು ಏನು ಈಗಾಗಲೇ 19 ಟಿ. ಎಂ. ಸಿ. ನೀರನ್ನು ಬೆಂಗಳೂರು ನಗರಕ್ಕೆ ತರಬೇಕಾದ ವ್ಯವಸ್ಥೆ ಇದೆ. ಇದನ್ನು ತರಬೇಕಾದರೆ ಏನಾದರೊಂದು ರೂಪ ತೆಗೆದುಕೊಳ್ಳಬೇಕೆಂಬ ದೃಷ್ಟಿಯಿಂದ, ಈಗಾಗಲೇ ಮೊದಲನೇ ಹಂತವನ್ನು ಬೆಂಗಳೂರು ಜಲಮಂಡಳಿಯವರು ತೆಗೆದು ಕೊಂಡಿದ್ದಾರೆ. 2ನೇ ಹಂತವನ್ನು ನಾವು ತೆಗೆದುಕೊಳ್ಳುವುದಕ್ಕೆ ಪ್ರಾರಂಭ ಮಾಡಿದ್ದೇವೆ. ಅದಕ್ಕೋಸ್ಕರವಾಗಿ ಕೆಲವು ರೂಪುರೇಷೆಗಳನ್ನು ಮಾಡಿ, ಇವತ್ತು ನಾವು ಇದನ್ನು ಮಾಡಿದ್ದೇವೆ ಇದರೊಳಗೆ ಒಂದು ಸೂಕ್ಷ್ಮವಾಗಿ ಅಡಕವಾಗಿರತಕ್ಕಂತಾದ್ದು. ಕಾವೇರಿ ಮೊದಲನೇ ಹಂತದಿಂದ 4ನೇ ಹಂತದ ಮೊದಲನೇ ಘಟ್ಟದವರೆಗೆ ಈಗಾಗಲೇ ಇರತಕ್ಕಂಥ ನಮ್ಮ ಕೊಳವೆಗಳಲ್ಲಿ ಬರತಕ್ಕ ನೀರನ್ನೇ ಶುದ್ಧೀಕರಣ

ಮಾಡಿ, ಬೆಂಗಳೂರು ನಗರಕ್ಕೆ ಕೊಡುತ್ತೇವೆ. ಕಾವೇರಿ 4ನೇ ಹಂತದ ಎರಡನೇ ಘಟ್ಟದಲ್ಲಿ ಕಾವೇರಿ ನದಿಯ ಶಿವ ಅಣೆಕಟ್ಟಿನಿಂದ ಸುಮಾರು 16 ಕಿಲೋ ಮೀಟರ್ ದೂರವನ್ನು, ಹೊಸದಾಗಿ 500 ಎಂ.ಎಲ್.ಡಿ. ನೀರನ್ನು ತರತಕ್ಕಂಥ ವ್ಯವಸ್ಥೆ ಆಗಬೇಕಾಯಿತು. ಇವತ್ತು 16 ಕಿಲೋಮೀಟರ್ ದೂರದ ಶಿವ ಅಣೆಕಟ್ಟಿನಿಂದ ತರಬೇಕಾದರೆ ಕನಿಷ್ಟ 125-130 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. ಇದಲ್ಲದೆ, ಕಾವೇರಿ 1, 2, 3 ಮತ್ತು 4ನೇ ಘಟ್ಟದ ಮೊದಲನೇ ಹಂತದವರೆಗೆ ವಿದ್ಯುಚ್ಛಕ್ತಿಯನ್ನು ನಾವೇನು ಮಾಡುತ್ತಿದ್ದೇವೆ, ನಮಗೆ ಬರುತ್ತಿರತಕ್ಕ 500ಕ್ಕೂ ಮೇಲ್ಪಟ್ಟು ಎಂ.ಎಲ್.ಡಿ. ನೀರಿಗೆ ಒಂದು ತಿಂಗಳಿಗೆ ನಾವು ಪ್ರತಿಶತ ಕೆ. ಇ. ಬಿ. ಯವರಿಗೆ 9 ಕೋಟಿ 45 ಲಕ್ಷ ರೂಪಾಯಿಗಳನ್ನು ಇವತ್ತು ಕಟ್ಟುತ್ತಾ ಇದ್ದೇವೆ.

ಈಗ 9 ಕೋಟಿ ಇರತಕ್ಕಂಥಾದ್ದು ಇನ್ನು ಒಂದು 5-10 ವರ್ಷಗಳು ಆದ ಮೇಲೆ 10-12 ಕೋಟಿ ರೂಪಾಯಿಗಳು ಆಗಬಹುದು. ಕಾವೇರಿ 4ನೇ ಹಂತದ ಎರಡನೇ ಘಟ್ಟಕ್ಕೆ ಕೆ.ಇ.ಬಿ. ಯವರಿಗೆ ಪ್ರತಿ ವರ್ಷಕ್ಕೂ ಕೂಡ ಅವರು ಪ್ರತಿಯೊಂದು ತಿಂಗಳಿಗೆ 10-12 ಕೋಟಿ ರೂಪಾಯಿಗಳನ್ನು ಯಾವ ಸಂಸ್ಥೆಯವರು ತೆಗೆದುಕೊಳ್ಳುತ್ತಾರೋ ಅವರೇ ಕೊಡಬೇಕಾಗುತ್ತದೆ. ಇಲ್ಲಿ ತಾವು ಹೇಳಿದಿರಿ, ಅಲ್ಲಿ ಏನೋ ತಂದು ಹಾಕುತ್ತಾರೆಂದು, ಈ 500 ಎಂ.ಎಲ್.ಡಿ ನೀರನ್ನು ಬೆಂಗಳೂರು ನಗರಕ್ಕೆ ತರತಕ್ಕಂಥಾದ್ದಕ್ಕೆ ತಾವು ರೂಪುರೇಷೆಗಳನ್ನು ಮಾಡಿದಾಗ ಬಂದಂತಹ ಬಿಡ್ಡರ್‌ಗಳಲ್ಲಿ ಬಹುಶಃ ನಾವು ಏನು ಇವತ್ತು ಇದನ್ನು ಕೊಡಬೇಕೆಂದು ತೀರ್ಮಾನ ಮಾಡಿರತಕ್ಕಂಥಾದ್ದರಲ್ಲಿಯೂ ಕೂಡ ನಾವು ದರವನ್ನು ನಿಗದಿಪಡಿಸಿಲ್ಲ. ಈ ದರವನ್ನು ನಿಗದಿಪಡಿಸುವುದಕ್ಕೆ ಸನ್ಮಾನ್ಯ ಅಧ್ಯಕ್ಷರಿಗೆ ಒಬ್ಬರಿಗೆ ಅಧಿಕಾರವನ್ನು ಕೊಟ್ಟಿದ್ದಾರೆ ಎನ್ನುವಂತಹ ಮಾತನ್ನು ತಾವು ಹೇಳಿದಿರಿ, ಜಲಮಂಡಲಿಯ ಅಧ್ಯಕ್ಷರೊಬ್ಬರಿಗೆ ನಾವು ಅಧಿಕಾರವನ್ನು ಕೊಟ್ಟಿಲ್ಲ, ಇದಕ್ಕೆ ಫೈನಾನ್ಸ್ ಸೆಕ್ರೆಟರಿಯವರು ಸದಸ್ಯರಾಗಿದ್ದಾರೆ. ಕಾನೂನು ಕಾರ್ಯದರ್ಶಿಗಳು ಇದ್ದಾರೆ. ಅದೂ ಅಲ್ಲದೆ ಬೆಂಗಳೂರು ನಗರಕ್ಕೆ ಮೊದಲನೇ ಹಂತ ಮತ್ತು ಎರಡನೇ ಹಂತದಲ್ಲಿ ನೀರನ್ನು ತಂದಂತಹ ಗುಲಾಂ ಅಹಮದ್ ಎಂದು ಯಾರು ಇದ್ದಾರೆ ಇಂಜನಿಯರಿಂಗ್ ಇನ್ ಚೀಫ್ ಅವರನ್ನೂ ಸಹ ದರ ನಿಗದಿ ಮಾಡತಕ್ಕಂಥ ಕಮಿಟಿಯಲ್ಲಿ ಸದಸ್ಯರನ್ನಾಗಿ ಮಾಡಿ, ಈಗಾಗಲೇ ಸರ್ಕಾರ ಆದೇಶವನ್ನು ಕೂಡ ಕಳುಹಿಸುತ್ತಿದ್ದೇವೆ. ನಮ್ಮ ಉದ್ದೇಶ ಇಷ್ಟೇ, ಬೆಳೆಯುತ್ತಿರುವಂತಹ ಬೆಂಗಳೂರು ನಗರಕ್ಕೆ ಕಾನೂನಿನ ಚೌಕಟ್ಟಿನಲ್ಲಿ 1300 ಎಂ.ಎಲ್.ಡಿ. ನೀರನ್ನು ತೆಗೆದುಕೊಳ್ಳಬೇಕು. ಮಾನ್ಯ ಸದಸ್ಯರಾದ ಸುರೇಶ್‌ಕುಮಾರ್ ಅವರು ಮತ್ತು ನಾನು ಸುಮಾರು 15-16 ವರ್ಷಗಳಿಂದ ಬೆಂಗಳೂರು ನಗರದಲ್ಲಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದೇವೆ. ಇವತ್ತು ಏನೋ ತಿಪ್ಪಗೊಂಡನಹಳ್ಳಿಯಲ್ಲಿ ನೀರು ಇದೆ. ಈ ವರ್ಷ ಮಳೆ ಬಂತು ಅದಕ್ಕೆ ತಿಪ್ಪಗೊಂಡನಹಳ್ಳಿ ಜಲಾಶಯಕ್ಕೆ ನೀರು ಬಂತು. ಹೋದ ವರ್ಷ ಆದಂತಹ ನಮ್ಮ ಬವಣೆ ಏನು ? ಹೆಸರುಘಟ್ಟ ಕೆರೆಯ ಮೇಲೆ ನಾವು ಡಿಪೆಂಡ್ ಆಗಿದ್ದೆವು. ಆಗ ಆದಂತಹ ಪರಿಸ್ಥಿತಿ ಏನು ? ಇವೆಲ್ಲವನ್ನೂ ನಾವು ಮನಗಂಡು ವಿಸ್ತಾರವಾಗಿ ಬೆಳೆಯುತ್ತಿರುವಂತಹ ಈ ನಗರಕ್ಕೆ ಪ್ರಾಯಶಃ ಇವತ್ತು ನಾವು ಕೊಳಚೆ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವಂತಹ ಜನಗಳಿಗೆ ಒಂದೇ ಒಂದು ಕಡೆ ಮನೆಗಳಿಗೆ ನಲ್ಲಿಗಳ ಮೂಲಕ ನೀರನ್ನು ಕೊಟ್ಟಿರತಕ್ಕಂಥ ಪ್ರಸಂಗಗಳು ಇಲ್ಲ. ಇದಲ್ಲದೇ

ಖಾಸಗಿ ಬಡಾವಣೆಗಳಿಗೆ ನಾವು ನೀರನ್ನು ಕೊಟ್ಟಿರತಕ್ಕಂಥ ಪ್ರಸಂಗಗಳು ಇಲ್ಲ. ಬೆಂಗಳೂರು ನಗರ ಸಮುದ್ರ ಮಟ್ಟದಿಂದ ಸುಮಾರು 3,200 ಅಡಿಗಳಷ್ಟು ಎತ್ತರದಲ್ಲಿದೆ. ಈ ನಗರಕ್ಕೆ ನೀರನ್ನು ತರತಕ್ಕಂಥಾದ್ದು ಆಗಲಿ ಈ ನಗರದಲ್ಲಿರತಕ್ಕಂಥ ನೀರಿನ ವ್ಯವಸ್ಥೆಯನ್ನು ಸರಿಪಡಿಸತಕ್ಕಂಥಾದ್ದು ಆಗಲಿ ಇದೊಂದು ಕ್ಲಿಷ್ಟಕರವಾದಂತಹ ಪರಿಸ್ಥಿತಿ. ಇವತ್ತು ಬೆಂಗಳೂರು ನಗರದಲ್ಲಿ ನಮ್ಮ ಒಂದು ಅಂಕಿ ಅಂಶಗಳ ಪ್ರಕಾರ ಒಂದು ಲಕ್ಷ ಬೋರ್‌ವೆಲ್‌ಗಳು ಇವೆ. ಒಂದು ಲಕ್ಷ ಬೋರ್‌ವೆಲ್‌ಗಳಲ್ಲಿ ಸುಮಾರು 25-26 ಪರ್ಸೆಂಟ್‌ನಷ್ಟು ಬೋರ್‌ವೆಲ್‌ಗಳು ಡ್ರೈ ಆಗಿವೆ. ಎಲ್ಲಾ ಕಡೆ ನೋಡಿದಾಗ ಸಮುದ್ರ ಮಟ್ಟಕ್ಕಿಂತ ಸುಮಾರು 3,200 ಅಡಿಗಳಷ್ಟು ಎತ್ತರದಲ್ಲಿರುವ ಬೆಂಗಳೂರು ನಗರವನ್ನು ಬೇರೆ ಯಾವುದೇ ಒಂದು ನಗರಕ್ಕೆ ಹೋಲಿಕೆ ಮಾಡಿಕೊಳ್ಳಲು ಸಾಧ್ಯವಿಲ್ಲ. ಬೊಂಬಾಯಿನಗರ ಇರಬಹುದು, ಕಲ್ಕತ್ತ ನಗರ ಇರಬಹುದು ಮತ್ತು ಮದ್ರಾಸ್ ನಗರ ಇರಬಹುದು, ಇವೆಲ್ಲವನ್ನೂ ಮನಗಂಡು ಬೆಂಗಳೂರು ನಗರಕ್ಕೆ ಏನಾದರೂ ಒಂದು ಹೊಸ ಕಾಯಕಲ್ಪವನ್ನು ಕೊಡಬೇಕು ಎನ್ನುವಂತಹ ಒಂದು ನಿಟ್ಟಿನಲ್ಲಿ ನಾವು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಇವತ್ತು ಬೇರೆ ಬೇರೆ ರಾಜ್ಯಗಳಲ್ಲಿಯೂ ಕೂಡ ಕುಡಿಯುವ ನೀರಿನ ವ್ಯವಸ್ಥೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಿ ಆ ನೀರನ್ನು ತೆಗೆದುಕೊಳ್ಳತಕ್ಕಂಥ ವ್ಯವಸ್ಥೆ ಇದೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀ ನಂಜೇಗೌಡರು ಈ ವಿಷಯದ ಬಗ್ಗೆ ಬಹಳ ಹೇಳಿದರು. ನಾವು ಈಗಾಗಲೇ ಒಂದನೇ ಹಂತದಿಂದ ಇಲ್ಲಿಯವರೆಗೆ ಎಷ್ಟು ಎಷ್ಟು ನೀರನ್ನು ಕೊಡುತ್ತಿದ್ದೇವೆ. ಈಗ ಈ ನೀರಿನ ಅವಶ್ಯಕತೆ ಇದೆಯೇ ಇಲ್ಲವೇ ಎನ್ನುವುದರ ಬಗ್ಗೆ ಒಂದು ಚಿಂತನೆಯನ್ನು ಮಾಡಿ ಒಂದು ಪುಸ್ತಕವನ್ನೂ ಸಹ ಬಿಡುಗಡೆ ಮಾಡುವಂತಹ ಒಂದು ತೀರ್ಮಾನವನ್ನು ಸಹ ನಮ್ಮ ಸರ್ಕಾರ ಮಾಡಿದೆ. ನಮ್ಮ ಉದ್ದೇಶ ಇಷ್ಟೇ. ಬಹುಶಃ ತಾವು ಮತ್ತು ಸುರೇಶ್ ಕುಮಾರ್ ಅವರು ಹೇಳಿದರು, ಈ ಬೋರ್ಡ್‌ಗೆ ಒಳ್ಳೆಯ ಎಫಿಷಿಯನ್ಸಿ ಇದೆ. ಅಂಕಗಳನ್ನು ಹಾಕುವಾಗ 650 ಅನ್ನು ಮಾತ್ರ ತಾವು ಆ ಕನ್‌ಸಲ್ಟೆನ್ಸಿಗೆ ಕೊಟ್ಟಿರಿ. ಇನ್ನೂ 350 ಅಂಕಗಳನ್ನು ಕೊಡಲಿಲ್ಲ ಎಂದು ದೊಡ್ಡ ಸಂಸ್ಥೆ ಈಗಾಗಲೇ ಹೆಮ್ಮರವಾಗಿ ಬೆಳೆದಿರತಕ್ಕಂಥ ಸಂಸ್ಥೆ. ಒಂದನೇ ಘಟ್ಟದಿಂದ 4ನೇ ಹಂತದವರೆಗೆ ಇರತಕ್ಕಂಥ ಎಲ್ಲಾ ಯೋಜನೆಗಳನ್ನು ಸರ್ಕಾರವೇ ಮಾಡಿರತಕ್ಕಂಥ ಒಂದು ಸ್ವಾಯತ್ತ ಸಂಸ್ಥೆ ಮಾಡಿರತಕ್ಕಂಥವರಿಗೆ ತಮ್ಮದೇ ಆದ ಒಂದು ನೈಪುಣ್ಯತೆಯನ್ನು ತಾಂತ್ರಿಕವಾಗಿ ಇರತಕ್ಕಂಥ ವ್ಯವಸ್ಥೆಯನ್ನು ಮಾಡತಕ್ಕಂಥಾದ್ದಕ್ಕೆ 350 ಅಂಕಗಳನ್ನು ಉಳಿಸಿಕೊಂಡು ಅಂಕಗಳನ್ನು ಯಾವ ರೀತಿ ಕೊಡಬೇಕೆನ್ನುವುದರ ಬಗ್ಗೆ ಅವರು ಎಲ್ಲವನ್ನೂ ಸಹ ಒಂದೊಂದಾಗಿ ಲೆಕ್ಕ ಇಟ್ಟುಕೊಂಡಿದ್ದಾರೆ. ತಾವು ಹೇಳಿದಿರಿ, ಇವತ್ತು ಟೆಕ್ನಿಕಲ್ ಪ್ರೊಪೋಸಲ್‌ನಲ್ಲಿ ಒ.ಇ.ಎಸ್. ನವರಿಗೆ 123 ಬಂದಿದೆ. ಬೈವಾಟರ್‌ನವರಿಗೆ 111ಬಂದಿದೆ. ಮತ್ತು ಸಿ.ಜಿ.ಇ. ನವರಿಗೆ 120 ಬಂದಿದೆ. ಒ ಅಂಡ್ ಎಂ ಪ್ರೊಪೋಸಲ್ ಇವತ್ತು ಒ.ಇ.ಎಸ್. ನವರಿಗೆ 48 ಬಂದಿದೆ. ಬೈ ವಾಟರ್‌ನವರಿಗೆ 50 ಬಂದಿದೆ. ಇವೆಲ್ಲಾ ಬೇರೆ ಬೇರೆಯವರು ಕನ್‌ಸಲ್‌ಟೆನ್ಸಿಯಲ್ಲಿ ಕುಳಿತಿರತಕ್ಕಂಥವರು.

ಶ್ರೀ ಕಾಗೋಡು ತಿಮ್ಮಪ್ಪ : ಕನ್‌ಸಲ್‌ಟೆನ್ಸಿ ಕಮಿಟಿಯಲ್ಲಿ ಯಾರ್ಯಾರು ಇದ್ದಾರೆ ?

ಶ್ರೀ ವಿ. ಸೋಮಣ್ಣ : ಅಪೆಕ್ಸ್ ಕಮಿಟಿ ಎಂದು ಮಾಡಿದ್ದಾರೆ. ಈ ಅಪೆಕ್ಸ್ ಕಮಿಟಿಯಲ್ಲಿ ಬೆಂಗಳೂರು ಜಲ ಮಂಡಲಿಯ ಮುಖ್ಯ ಅಭಿಯಂತರರು ಯಾರು ಇದ್ದಾರೆ, ಅವರು ಅಲ್ಲಿ

ಸದಸ್ಯರಾಗಿದ್ದಾರೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಯವರಿಗೆ 100 ಅಂಕಗಳು ಇವೆ. ಅದರಲ್ಲಿ 69 ಅಂಕಗಳನ್ನು ಒ.ಇ.ಎಸ್. ನವರಿಗೆ ಕೊಟ್ಟಿದ್ದಾರೆ. ಇದನ್ನು ದಯಮಾಡಿ ಮಾನ್ಯ ಸುರೇಶ್‌ಕುಮಾರ್ ಅವರು ನೋಡಬೇಕು. ಯಾವ ಒ ಅಂಡ್ ಎಂ ಎಕ್ಸ್‌ಪಿರೀಯನ್ಸ್‌ನಲ್ಲಿ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿಗೆ ಕೊಟ್ಟಿರತಕ್ಕಂಥಾದ್ದರಲ್ಲಿ 69 ಅಂಕಗಳನ್ನು ಒ.ಇ.ಎಸ್ ನವರಿಗೆ ಕೊಟ್ಟಿದ್ದಾರೆ. ಕೇವಲ 31.40 ಅಂಕಗಳನ್ನು ಬೈವಾಟರ್‌ನವರಿಗೆ ಕೊಟ್ಟಿದ್ದಾರೆ. 53.15 ಅನ್ನು ಸಿ.ಜಿ.ಇ. ಯವರಿಗೆ ಕೊಟ್ಟಿದ್ದಾರೆ.

ಶ್ರೀ ಎಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಮೊದಲು ಸರ್ಕಾರದವರು ಕ್ಲಾರಿಫೈ ಮಾಡಬೇಕಾಗಿರುವಂತಾದ್ದು ಆತ ಸರ್ಕಾರಕ್ಕೆ ಇವರಿಗೆ ಕೊಡಿ ಎಂದು ಮೂರು ಪತ್ರಗಳನ್ನು ಬರೆದಿದ್ದರೋ ಇಲ್ಲವೋ ಎಂದು ಆಮೇಲೆ ಅವರು ಸರ್ಕಾರದಿಂದ ಭರವಸೆ ಸಿಗದಿದ್ದರೆ ಯು.ಕೆ.ಕಾನ್ಫರೆನ್ಸ್ ಸಮ್ಮರ್ 98ರಲ್ಲಿ ನಾವು ಬೆಂಗಳೂರಿಗೆ ತೆಗೆದುಕೊಂಡಿದ್ದೇವೆಂದು ಹೇಗೆ ಹೇಳುತ್ತಾರೆ? ಈಗ ಎಷ್ಟು ನೀರು ತೆಗೆದುಕೊಳ್ಳುತ್ತಿದ್ದೀರಿ? ಎಷ್ಟು ಜನಸಂಖ್ಯೆ ಇದೆ. ಪರ್ ಹೆಡ್ ಎಷ್ಟು ಕೊಡುತ್ತೀರಿ? ಈ ಮೂರು ಪತ್ರಗಳನ್ನು ನಿಮ್ಮ ಚೇರ್ಮನ್ ಬರೆದಿದ್ದರೋ ಇಲ್ಲವೋ ಎಂಬುದನ್ನು ಹೇಳಿ.

ಶ್ರೀ ವಿ. ಸೋಮಣ್ಣ : ಕಾಗದ ಪತ್ರಗಳನ್ನು ಬರೆಯತಕ್ಕಂಥಾದ್ದು ಒಬ್ಬ ಜಲ ಮಂಡಲಿಯ ಅಧ್ಯಕ್ಷರಾಗಿ ಹಾಗೂ ನಗರದ ಜನರಿಗೆ ಬೇಕಾಗಿರತಕ್ಕಂಥ ನೀರನ್ನು ಕೊಡತಕ್ಕಂಥಾದ್ದು ಆದ್ಯ ಕರ್ತವ್ಯ ಎಂದು ಅರಿತುಕೊಂಡು ನಮ್ಮ ಸರ್ಕಾರಕ್ಕೆ ಗಮನಹರಿಸಿರತಕ್ಕಂಥಾದ್ದು ...

ಶ್ರೀ ಎಸ್. ಸುರೇಶ್ ಕುಮಾರ್ : ಅವರು ಪತ್ರ ಬರೆಯುವುದು ಒಳ್ಳೆಯದು. ಆದರೆ ಏನಂತ ಇಲ್ಲಿಗೆ ನೀರು ಬರುತ್ತಿಲ್ಲ, ಅಲ್ಲಿಗೆ ಲೈನ್ ಬದಲಾಯಿಸಿ, ಇಲ್ಲಿಗೆ ಈ ಪ್ರೆಷರ್ ಕೊಡಿ ಎಂದು. ಆದರೆ ಬೈವಾಟರ್‌ಗೆ ಕೊಡಿ ಎಂದು ಬರೆಯುವುದಕ್ಕೆ ಛೇರ್ಮನ್‌ಗೆ ಹಕ್ಕು ಇದೆಯೇ ?

ಶ್ರೀ ವಿ. ಸೋಮಣ್ಣ : ಆದರೆ ಇವತ್ತು ...

ಶ್ರೀ ಎಸ್. ಸುರೇಶ್ ಕುಮಾರ್ : ಈಗ ಇದಕ್ಕೆ ಉತ್ತರ ಕೊಡಿ. ಛೇರ್ಮನ್‌ಗೆ ಪಾಪ ಬೆಂಗಳೂರು ಬಗ್ಗೆ ಕಾಳಜಿ ಇದೆ. ಅದಕ್ಕೋಸ್ಕರ ಮೂರು ಪತ್ರಗಳನ್ನು ಬೈವಾಟರ್‌ಗೆ ಕೊಡಿ ; ಅವರಿಗೆ ಕೊಟ್ಟರೆ ಜನ ಬದುಕುವುದು ಎಂದು ಪತ್ರ ಬರೆಯುವುದಕ್ಕೆ ಹಕ್ಕು ಇದೆಯೇ ?

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಜಲಮಂಡಲಿಯ ಅಧ್ಯಕ್ಷರಾಗಿ ಅವರು ಪತ್ರವನ್ನು ಬರೆದಿದ್ದರೂ ಕೂಡ, ಸರ್ಕಾರ ಕಾನೂನು ಚೌಕಟ್ಟಿನಲ್ಲಿ ಅಲ್ಲದೆ ಬೇರೆ ಏನೂ ಮಾಡಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕಾನೂನು ಚೌಕಟ್ಟಿನಲ್ಲಿಯೇ ಅಂದರೆ ಹೇಗೆ ? ಮೊದಲೇ ಪತ್ರ ಬರಯುವುದೇ ? ನೀವು ನಿರ್ಣಯ ತೆಗೆದುಕೊಳ್ಳುವುದಕ್ಕಿಂತ ಮುಂಚಿತವಾಗಿ ಹೇಗೆ ಬರೆಯುತ್ತಾರೆ.

ಶ್ರೀ ವಿ. ಸೋಮಣ್ಣ : ಸರ್ಕಾರಕ್ಕೆ ಅವರು ಪತ್ರ ಬರೆದಿಲ್ಲ. ನಾನು ತಮಗೆ ಸ್ಪಷ್ಟೀಕರಣ ನೀಡುತ್ತೇನೆ ಅವರು ಬೈವಾಟರ್‌ಗೆ ಕೊಡಿ ಎಂದು ಪತ್ರ ಬರೆದಿಲ್ಲ.

ಶ್ರೀ ಎಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ಈಗ ಪ್ರಿವಿಲೇಜ್‌ಗೆ ಹಾಕಬೇಕಾಗುತ್ತದೆ.

ಈಗ ನೋಡಿ. ಗೌರ್ನಮೆಂಟ್ ಆರ್ಡರ್ ನಂ. ಯು ಡಿ ಡಿ 48 ಎನ್ ಎನ್ ಐ 97 ದಿನಾಂಕ 20-6-97 ಇದು ಪ್ರೊಸೀಡಿಂಗ್ಸ್ ಆಫ್ ದಿ ಗೌರ್ನಮೆಂಟ್ ಆಫ್ ಕರ್ನಾಟಕ. ಇದರಲ್ಲಿ ಇವರೇ ಬರೆಯುತ್ತಾರೆ. ಇಲ್ಲಿ ಛೇರ್ಮನ್ ಅವರ ಮೂರು ಪತ್ರಗಳನ್ನು ರೆಫರ್ ಮಾಡಿದ್ದಾರೆ.

" The chairman, Bangalore Water Supply and Sewerage Board in his letter read above sent proposal of M/s Biwater Shellabear(Malaysia)stating that the Cauvery Water Supply Scheme Stage-IV, Phase-II and Cauvery Water Supply Scheme stage-V can be combined and the scheme can be offered for private participation, bringing about 500 MID of water to Bangalore city."

"Government as a policy feels that water supply in Bangalore should be privatised . . . " ಇವರಿಗೆ ಕೊಡುವುದಕ್ಕೆ ಪ್ರೈವೆಟೈಜ್ ಮಾಡಬೇಕು ಇವರು.

". . . to make it more responsible, efficient to the needs of the people and that the B.W.S.S.B. shall call for global tenders to get the competitive response. . . "

ಶ್ರೀ ಜೆ. ಎಚ್. ಪಟೇಲ್ : (ಮುಖ್ಯ ಮಂತ್ರಿಗಳು) ಮಾನ್ಯ ಅಧ್ಯಕ್ಷರೇ ಯಾವುದೋ ಒಂದು ಪೇಪರ್ ಹಿಡಿದುಕೊಂಡು ಬರುವುದು. ಅವರು ಪತ್ರ ಬರೆದಿದ್ದಾರೆ ಬೈವಾಟ್‌ನವರಿಗೆ ಕೊಡಿ ಎಂದು ಎಂದು ಹೇಳುವುದು. It is absolutely false. What the Chairman of the B.W.S.S.B. has written to the government, to give it to a private party, not Biwater. The Chairman, B.W.S.S.B. in his 3 letters did not recommend the entrustment of project to this Biwater. But only suggested that scheme for bringing 500 MID of water to Bangalore can be sanctioned as Cauvery Water Supply Scheme Phase-iv, Stage-I project and offered the private sector participation through tender route. ಎಂದು ಹೇಳಿದ್ದಾರೆ. ಹೇಗೆ ಅವರು ಮೂರು ಲೆಟರ್ಸ್ ಬರೆಯುತ್ತಾರೆ, ಹೇಗೆ ಬರೆಯುತ್ತಾರೆ. ಬೈವಾಟರ್‌ಗೆ ಕೊಡಿ ಎಂದು. ನೀವು ಏನು ತಿಳಿದುಕೊಂಡಿರುತ್ತೀರಿ ಅದೇ ಸತ್ಯವೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, Then refer it to Joint Select Committee. ಈಗ ನಾವು ಸುಳ್ಳೋ ನೀವು ಸುಳ್ಳೋ ಎನ್ನುವುದು ಬೇಡವೇ ಬೇಡ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ ನೋಡೋಣ.

ಶ್ರೀ ಜೆ. ಎಚ್. ಪಟೇಲ್ : ನಿಮಗೆ ಎಷ್ಟು ಜವಾಬ್ದಾರಿ ಇದೆಯೋ ಅದಕ್ಕಿಂತ ಕಡಿಮೆ ಏನೂ ಇಲ್ಲ ನಮಗೆ ಜವಾಬ್ದಾರಿ. Suresh I give all respect and affection to him, ರೆಸ್ಪಾನ್ಸಿಬಲ್ ಆಗಿ ಹೇಳಿ. The Government cannot just, ... ಇವರನ್ನು ನೇಣು ಹಾಕಿ ಬಿಡಿ. ಇವರು

ಹಾಗೆ ತಿಂದಿದ್ದಾರೆ. ಇವರು ಹೀಗೆ ತಿಂದಿದ್ದಾರೆ. ಎಂದು ಅಲ್ಲ.

ಶ್ರೀ ಎಸ್. ಸುರೇಶ್‌ಕುಮಾರ್ : ಅದಕ್ಕೋಸ್ಕರ I was fair enough. ನಿಮ್ಮದೂ ಬೇಡ, ನಮ್ಮದೂ ಬೇಡ ಜನಕ್ಕೆ ಗೊತ್ತಾಗಲಿ. Let it be transparent. Refer it to a Joint Select Committee. ಇದು ಇಡೀ ನಗರಕ್ಕೆ ಇನ್ನು 30 ವರ್ಷಕ್ಕೆ ಬರುವುದು. ಅದನ್ನೆಲ್ಲಾ ತಾವು ಒಪ್ಪಿಕೊಳ್ಳುತ್ತೀರಾ ? ಭಾರ ಬರುವುದು 1,400 ಕೋಟಿ ರೂಪಾಯಿಗಳು. Refer it to a Joint Select Committee.

11.50 ಎ. ಎಂ.

ಶ್ರೀ ವಿ. ಸೋಮಣ್ಣ : ಮಾನ್ಯ ಅಧ್ಯಕ್ಷರೇ, ಒಟ್ಟಿನಲ್ಲಿ ಬೆಂಗಳೂರು ನಗರಕ್ಕೆ ನೀರು ತರಬೇಕು. ಜನರಿಗೆ ನೀರು ಕೊಡುವ ವ್ಯವಸ್ಥೆಯಾಗಬೇಕು. ಯಾರಾದರೂ ಇತಿಹಾಸದಲ್ಲಿ 19 ಟಿ.ಎಂ.ಸಿ ನೀರಲ್ಲಿ 11 ಟಿಎಂಸಿ ನೀರನ್ನು ತೆಗೆದುಕೊಳ್ಳುವ ದಿಟ್ಟ ನಿರ್ಧಾರವನ್ನು ತೆಗೆದುಕೊಂಡಿದ್ದಲ್ಲಿ ಅದು ನಮ್ಮ ಸರಕಾರ ಎಂದು ಹೇಳಬಯಸುತ್ತೇನೆ. ಇವೊತ್ತು ನಾವು ಒಂದು ಸಾವಿರ ಮಾರ್ಕ್‌ಗಳಲ್ಲಿ ಬೇರೆ ಬೇರೆಯವರಿಗೆ ಮಾರ್ಕ್‌ಗಳನ್ನು ಕೊಟ್ಟಿರುತ್ತೇವೆ. ಅದರಲ್ಲಿ ಬೋವೀಸ್‌ನವರಿಗೆ 725.96 ಬಂದಿದೆ, ಬೈವಾಟರ್‌ನವರಿಗೆ 757.47 ಬಂದಿದೆ, ಸಿಜಿಇ ಯವರಿಗೆ 604.80 ಬಂದಿದೆ. ಇದರಿಂದ ಯಾವುದೋ ಮಾರ್ಕ್ಸ್‌ನ್ನು ಯಾರೂ ಕೊಟ್ಟಿಲ್ಲ. ಪ್ರತಿಯೊಂದರಲ್ಲಿಯೂ ಫೈನಾನ್ಸ್ ಏನು ? ಬೂಟ್ಸ್ ಏನು, ಓ. ಅಂಡ್ ಎಂ. ಏನು ? ಟೆಕ್ನಿಕಲ್ ಏನು ? ಕಮರ್ಶಿಯಲ್ ಏನು ಎಂಬುದನ್ನೆಲ್ಲಾ ಕ್ರೋಢೀಕರಿಸಿ ನಾವು ಕೊಟ್ಟಿರತಕ್ಕಂಥಾದ್ದು ನೆಗೋಸಿಯೇಷನ್ ಮಾಡಿ, ನೀರಿನ ದರವನ್ನು ನಿಗದಿಪಡಿಸತಕ್ಕಂಥಾದ್ದಕ್ಕೆ. ನೀರಿನ ದರವನ್ನು ನಾವು ಇನ್ನೂ ನಿಗದಿಪಡಿಸಿಲ್ಲ. ಬೆಂಗಳೂರು ನಗರದ ಜನರಿಗೆ ಮಾರಕವಾಗುವಂಥ ಯಾವುದೇ ಒಂದು ಕೆಲಸವನ್ನು ಈ ಸರಕಾರವು ಮಾಡುವುದಿಲ್ಲ. ಇವೊತ್ತು ಸೊನ್ನೆ ಇಂದ 25 ಸಾವಿರ ಲೀಟರ್ ವರೆಗೆ ಇರತಕ್ಕಂಥ ರೇಟ್‌ನ್ನು ತಾವುಗಳೆಲ್ಲರೂ ಹೇಳಿದ್ದೀರಿ. ಬೆಂಗಳೂರು ನಗರದಲ್ಲಿ ಇವೊತ್ತು ಬಹುತೇಕ ಇಂಡಸ್ಟ್ರಿಗಳನ್ನು ನಾವು ಮುಚ್ಚುತ್ತಾ ಇದ್ದೇವೆ. ಇಲ್ಲಿಯವರೆಗೆ ನಾವು ಇಂಡಸ್ಟ್ರಿಯವರಿಗೆ ಕೊಡತಕ್ಕಂಥ ನೀರಿನ ಪ್ರಮಾಣ ಕೇವಲ 2.5 ಪರ್‌ಸೆಂಟ್ ಮಾತ್ರ. ಅವರಿಂದ ನಮಗೆ ಡಿಮ್ಯಾಂಡ್ ಇರತಕ್ಕಂಥಾದ್ದು 15 ಪರ್‌ಸೆಂಟ್. ಬೇರೆ ಬೇರೆ ರಾಜ್ಯಗಳಲ್ಲಿ ಅದು ಮುಂಬಯಿ, ಹೈದ್ರಾಬಾದ್, ಕಲ್ಕತ್ತ, ಮದ್ರಾಸ್ ಮುಂತಾದ ಕಡೆಗಳಲ್ಲಿ 20 ಭಾಗದಷ್ಟು ನೀರನ್ನು ಇಂಡಸ್ಟ್ರಿಗಳಿಗೆ ಒದಗಿಸಿ ಅಲ್ಲಿಂದ ಬರತಕ್ಕಂಥ ಹೆಚ್ಚಿಗೆ ಹಣವನ್ನು ಗ್ರಾಹಕರ ಬಳಕೆಗೋಸ್ಕರವಾಗಿ, ದಿನಬಳಕೆಯಲ್ಲಿ ಉಪಯೋಗಿಸುವ ಸಲುವಾಗಿ ಹಣವನ್ನು ಉಪಯೋಗಿಸಿಕೊಳ್ಳುತ್ತಾರೆ. ಕೇವಲ 2.5ಪರ್‌ಸೆಂಟ್‌ನಷ್ಟು ನೀರನ್ನು ಮಾತ್ರ ಇಂಡಸ್ಟ್ರಿಯವರಿಗೆ ಕೊಟ್ಟು ಉಳಿದಿರತಕ್ಕಂಥ ಎಲ್ಲಾ ನೀರಿನ ಪ್ರಮಾಣವನ್ನು ಗೃಹ ಬಳಕೆಗೆ ಕೊಡುತ್ತಿದ್ದೇವೆ. ನಮ್ಮ ಮೊದಲ ಮತ್ತು ಎರಡನೇ ಘಟ್ಟದಿಂದ ಬರತಕ್ಕಂಥ 800 ಎಂ ಎಲ್‌ಡಿ ನೀರು ಏನಿದೆ, ಅದರಲ್ಲಿ 720 ಎಂ ಎಲ್‌ಡಿ ನೀರು ನಮಗೆ ಬರುತ್ತದೆ. ಅದರಲ್ಲಿ ಕನಿಷ್ಟಪಕ್ಷ 10-12 ಪರ್‌ಸೆಂಟ್‌ನಷ್ಟು ನೀರನ್ನು ಇಂಡಸ್ಟ್ರಿಯವರಿಗೆ ಕೊಟ್ಟರೆ ನಮಗೆ ಇವೊತ್ತು ದರ ಏನಿದೆ, ಆವೊತ್ತಿನ ದರ ಏನಾಗುತ್ತದೆ ಒಂದು ರೂಪಾಯಿ, ಎರಡು ರೂಪಾಯಿ ಹೆಚ್ಚು ಆಗುತ್ತದೆ. ನಮ್ಮ

ಮಾಮೂಲಿ ಟ್ಯಾರೀಫ್. ಇಷ್ಟನ್ನು ಬಿಟ್ಟರೆ ನಮ್ಮ ಬೆಂಗಳೂರು ನಗರಕ್ಕೆ ಮಾರಕವಾಗುವಂಥ ಯಾವುದೇ ಕೆಲಸವನ್ನು ನಮ್ಮ ಸರಕಾರವು ಮಾಡುವುದಿಲ್ಲ. ಇವೊತ್ತು ಹತ್ತು ಲಕ್ಷ ಮನೆಗಳನ್ನು ಕಟ್ಟಿ, ಕೇವಲ ಎರಡು-ಮೂರು ಲಕ್ಷ ಮನೆಗಳಿಗೆ ನೀರನ್ನು ಕೊಟ್ಟರೆ ಏನು ಸಾರ್ಥಕ ಬಂತು ? ನಮಗೆ ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಸ್ಲಂಗಳಲ್ಲಿ ವಾಸ ಮಾಡತಕ್ಕಂಥವರಿಗೆ ಕನಿಷ್ಠ ಪಕ್ಷ 12-130 ಲೀಟರ್‌ಗಳಷ್ಟು ನೀರು ಕೊಡಬೇಕಾಗುತ್ತದೆಯಾದರೂ ಅವರಿಗೆ 90 ಲೀಟರ್ ನೀರನ್ನೂ ಕೂಡ ಕೊಡಲು ಸಾಧ್ಯವಾಗುತ್ತಿಲ್ಲ. ಇಂಥ ಒಂದು ಉತ್ತಮ ಕಾರ್ಯವನ್ನು ಮಾಡಬೇಕೆನ್ನುವ ದೃಷ್ಟಿಯನ್ನು ನಾವು ಇಟ್ಟುಕೊಂಡು, ಕಾರ್ಯಕ್ರಮವನ್ನು ಹಮ್ಮಿಕೊಂಡಿರತಕ್ಕಂಥ ಸಂದರ್ಭದಲ್ಲಿ ತಾವುಗಳು ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿ ಎಂದು ಕೇಳಿದ್ದೀರಿ. ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರಿಗೆ ಗೊತ್ತಿದೆ. 19 ಟಿಎಂಸಿ ನೀರನ್ನು ತೆಗೆದುಕೊಳ್ಳಿ ಎಂದು ಭಾರತ ಸರಕಾರದವರು ನಿರ್ದೇಶನ ನೀಡಿದ್ದರೂ ಕೂಡ ಕೇವಲ 8 ಟಿ.ಎಂ.ಸಿ. ನೀರನ್ನು ಮಾತ್ರ ನಾವು ಉಪಯೋಗಿಸಿಕೊಂಡು, ಉಳಿದಿರತಕ್ಕಂಥ 11 ಟಿಎಂಸಿ ನೀರನ್ನು ಪಡೆಯಲು ಆಗಿಲ್ಲ. . . ಬೇರೆ ಬೇರೆ ರೀತಿಯಲ್ಲಿರತಕ್ಕಂಥ ನಮ್ಮ ಹಾಹಾಕಾರ, ನಮ್ಮಲ್ಲಿರತಕ್ಕಂಥ ಗ್ರ್ಯಾಂಡ್‌ಲೆವೆಲ್ ರಿಸರ್‌ವಾಯರ್‌ಗಳು, ಓವರ್‌ಹೆಡ್ ಟ್ಯಾಂಕ್‌ಗಳು, ಮುಂತಾದ ನಮ್ಮಲ್ಲಿನ ವ್ಯವಸ್ಥೆಗಳನ್ನು ನೋಡಿದರೆ ಬಹುಶಃ 1300ಎಂಎಲ್‌ಡಿ ನೀರನ್ನು ಶೇಖರಣೆ ಮಾಡತಕ್ಕಂಥ ಸಾಮರ್ಥ್ಯವು ನಮಗೆ ಇದೆ. ಇವೆಲ್ಲವನ್ನೂ ಮನಗಂಡು ಬೈವಾಟರ್‌ನವರಿಗೆ ಏನು ಎಕ್ಸ್‌ಪೀರಿಯನ್ಸ್ ಇದೆ ಎಂದು ಕೇಳಿದ್ದೀರಿ. 65 ರಾಷ್ಟ್ರಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡತಕ್ಕಂಥಾದ್ದರಲ್ಲಿ ನೈಪುಣ್ಯವನ್ನು ಪಡೆದಿದ್ದೇವೆ ಎಂಬ ಅಂಶವನ್ನು ಅವರು ವಿವರಗಳಲ್ಲಿ ಕೊಟ್ಟಿದ್ದಾರೆ. ತಮಗೆ ಗೊತ್ತಿರುವ ಹಾಗೆ ಬೆಂಗಳೂರು ನಗರದ ರೆವಿನ್ಯೂ ಪಾಕೆಟ್‌ಗಳಿಗೆ ನಾವು ಇನ್ನೂ ನೀರು ಕೊಟ್ಟಿಲ್ಲ. ಹೋಟೆಲ್‌ಗಳಿಗೆ ನಾವು ನೀರು ಕೊಟ್ಟಿಲ್ಲ, ಇಂಡಸ್ಟ್ರಿಯನ್ನು ನಡೆಸತಕ್ಕಂಥವರಿಗೆ ನಾವು ನೀರು ಕೊಟ್ಟಿಲ್ಲ. ಹೀಗೆ ಯಾರಿಗೂ ನೀರನ್ನು ಕೊಡದೇ ಗೃಹಬಳಕೆಗಾಗಿ ದಿನಬಿಟ್ಟು ದಿನ ನೀರು ಕೊಡುತ್ತಿರುವ ಸಂದರ್ಭದಲ್ಲಿ ಈ ಘನ ಸದನಕ್ಕೆ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನೂ ಕೂಡ ಬೆಂಗಳೂರು ನಗರದ ಜನಪ್ರತಿನಿಧಿಯಾಗಿ ಚುನಾಯಿತನಾಗಿ ಬಂದಿರತಕ್ಕಂಥವನು. ನನಗೂ ಕೂಡ ಜನರ ಬಗ್ಗೆ ತುಂಬಾ ಕಾಳಜಿ ಇದೆ. ಕೇವಲ 1380 ಕೋಟಿ ರೂಪಾಯಿಗಳು, ಅದೂ ಕೂಡ ನಾವು ದರವನ್ನು ನಿಗದಿ ಮಾಡಿದ ಮೇಲೆ, 500 ಎಂಎಲ್‌ಡಿ ನೀರನ್ನು ನಾವು ಏಕಕಾಲದಲ್ಲಿ ತೆಗೆದುಕೊಳ್ಳುವ ಪರಿಸ್ಥಿತಿಯಲ್ಲಿಲ್ಲ. ನಾವು ಇವೊತ್ತು 100 ಎಂಎಲ್‌ಡಿ 200 ಎಂ ಎಲ್‌ಡಿ ನೀರನ್ನು ಕೇಳುತ್ತೇವೆ. ಇವೆಲ್ಲವನ್ನೂ ಕೂಡ ಅಗ್ರಿಮೆಂಟ್‌ನಲ್ಲಿ ಅಳವಡಿಸಿದ್ದೇವೆ. ನಾವು ಯಾವುದೇ ಕಾರಣಕ್ಕೂ ಕಾನೂನನ್ನು ಬಿಟ್ಟು ಒಂದು ಇಂಚೂ ಕೂಡ ಮುಂದೆ ಹೋಗಿಲ್ಲ. ಬೆಂಗಳೂರು ನಗರಕ್ಕೆ 1300 ಎಂಎಲ್‌ಡಿ ನೀರು ಬೇಕಾಯಿತು ಅಂದರೆ, ಅವರಿಗೆ ನಾವು 500ಎಂಎಲ್‌ಡಿ ನೀರು ಕೊಡಿ ಎಂದು ಕೇಳುತ್ತೇವೆ. ಇದು ನಮ್ಮ ಉದ್ದೇಶ. ನಮಗೆ 150ಎಂಎಲ್‌ಡಿ 200 ಎಂಎಲ್‌ಡಿ, ಹೀಗೆ ಎಷ್ಟು ಎಂಎಲ್‌ಡಿ ನೀರು ಬೇಕೋ ಅಷ್ಟೇ ಹಣವನ್ನು ನಾವು ಅವರಿಗೆ ಕೊಡುತ್ತೇವೆ. ಈ ರೀತಿಯಾಗಿ ನಾವು ಕಾನೂನನ್ನು ಉಲ್ಲಂಘನೆ ಮಾಡದೇ ಕಾರ್ಯಕ್ರಮಗಳನ್ನು ರೂಪಿಸಿಕೊಂಡು, ಬಂದಿದ್ದೇವೆ. ಇವೊತ್ತು ಹಂತಗಳ ಬಗ್ಗೆ ತಾವುಗಳು ಹೇಳಿದ್ದೀರಿ. ಯಾವುದೇ ಒಂದು ದೊಡ್ಡ ಸಂಸ್ಥೆಯು ತನ್ನ ಕಂಟ್ರೋಲ್‌ನಲ್ಲಿ ಏನೂ

ಇಟ್ಟುಕೊಳ್ಳದೆ ಎಲ್ಲವನ್ನೂ ಬೇರೆಯವರಿಗೆ ಕೊಟ್ಟುಬಿಡಬೇಕು ಎಂದಾಗ ಅದಕ್ಕೆ ಏನಾದರೂ ಸ್ವಲ್ಪಮಟ್ಟಿನ ಸಫಲತೆಯನ್ನು ಕಾಣಲು ಆಗುತ್ತದೆಯೇ ಎಂಬ ಬಗ್ಗೆಯೂ ಕೂಡ ತಾವುಗಳು ಯೋಚನೆ ಮಾಡಬೇಕಾಗುತ್ತದೆ. ತಾವುಗಳು, ಗೌರವಾನ್ವಿತ ಸದಸ್ಯರುಗಳು ಬಹಳಷ್ಟು ಅತ್ಯಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದೀರಿ. ಆ ತಮ್ಮ ಸಲಹೆಗಳನ್ನು ನಾವು ಮನಸ್ಸಿನಲ್ಲಿಟ್ಟುಕೊಂಡು ನಾವೇನು 1500 ಕೋಟಿ ರೂಪಾಯಿಗಳು ಎಂದು ಹೇಳುತ್ತಿದ್ದೇವೆ ಅದು ಅಷ್ಟಲ್ಲ. ಇದು 1370 ಕೋಟಿರೂಪಾಯಿಗಳಷ್ಟು ಆಗತಕ್ಕಂಥಾದ್ದು. ಈ ದರವನ್ನು ನಿಗದಿ ಮಾಡತಕ್ಕಂಥ ಸಮಿತಿಯು ಏನಿದೆ, ಅದರಲ್ಲಿ ಫೈನಾನ್ಸ್ ಸೆಕ್ರೆಟರಿಯವರು, ಲಾ-ಸೆಕ್ರೆಟರಿಯವರು, ಬೆಂಗಳೂರು ನಗರಕ್ಕೆ ನೀರು ತರತಕ್ಕಂಥದ್ದರಲ್ಲಿ ದಿವಂಗತ ಮಗ್ದಂರವರನ್ನು ಹೊರತುಪಡಿಸಿದರೆ, ಗುಲಾಮ್ ಅಹಮದ್‌ರವರು ಒಬ್ಬ ರಿಟೈರ್ಡ್ ಚೀಫ್ ಇಂಜಿನೀಯರ್ ಆಗಿದ್ದಂಥವರು ಹೀಗೆ ಮೂರು ಜನರ ಅಭಿಪ್ರಾಯವನ್ನು ಪಡೆದು, ಮತ್ತೆ ಕ್ಯಾಬಿನೆಟ್‌ಗೆ ತಂದು, ಕ್ಯಾಬಿನೆಟ್‌ನಲ್ಲಿಯೂ ಕೂಡ ಅದರ ಸಾಧ್ಯಾಸಾಧ್ಯತೆಗಳನ್ನು ನೋಡಿ, ನಗರಕ್ಕೆ ಬೇಕಾಗುವಂಥ ನೀರಿನ ದರವನ್ನು ಎಷ್ಟು ಕಡಿಮೆ ಮಾಡಿ ಬೆಂಗಳೂರು ನಗರದ ವಿಚಾರ 2001, 2007ನೇ ಇಸವಿಗೆ ಏನಾಗಬಹುದು ಎಂದು ನೋಡಬೇಕಾಯಿತು. ಬೆಂಗಳೂರು ನಗರದ ಜನಸಂಖ್ಯೆಯು 50 ಲಕ್ಷ ಇರತಕ್ಕಂಥಾದ್ದನ್ನು ದೊಡ್ಡ ನಗರದ ಜಿಲ್ಲೆಯನ್ನಾಗಿ ಮಾಡಿ ಲಕ್ಷಾಂತರ ಜನರಿಗೆ ಸರಿಯಾಗಿ ಕುಡಿಯುವ ನೀರನ್ನೂ ಕೂಡ ಕೊಡಲು ಆಗುವುದಿಲ್ಲವೆಂಬ ಪರಿಸ್ಥಿತಿ ಬಂದರೆ ಏನಾಗುತ್ತದೆ ? ನಾನು ಮೊನ್ನೆ ಒಂದು ಬೆಳ್ಳಂದೂರು ಎಂಬ ಊರಿಗೆ ಹೋಗಿದ್ದೆನು. ಅಲ್ಲಿ ಸಹಸ್ರಾರು ಮನೆಗಳು ತಲೆ ಎತ್ತಿವೆ. ಬೆಂಗಳೂರು ನಗರದ ಸ್ಯಾನಿಟರಿ ನೀರು ಆ ಊರಿನ ಕೆರೆಗೆ ಹೋಗುತ್ತದೆ. ಆ ಕೆರೆಯಲ್ಲಿ ಬೋರ್‌ವೆಲ್‌ಗಳನ್ನು ಹಾಕಿದರೆ ಅದೇ ನೀರು ಬರುತ್ತಿದೆ. ಆ ನೀರನ್ನು ಕುಡಿದಿದ್ದೇ ಆದರೆ, ಜನರಿಗೆ ಎಲ್ಲಾ ತರಹದ ಖಾಯಿಲೆಗಳು ಬರುತ್ತವೆ. ಈ ರೀತಿಯಲ್ಲಿ ಬೆಳೆಯುತ್ತಿರುವ ಬೆಂಗಳೂರು ನಗರ, ಉಪನಗರಗಳಿಗೆ ನಾವು ನೀರನ್ನು ಕೊಡಬೇಕೆನ್ನುವ ದೃಷ್ಟಿಯಿಂದ ನಾವು ಕಾವೇರಿ 4ನೇ ಘಟ್ಟದ ಮೊದಲನೇ ಹಂತ, ಕಾವೇರಿ ನಾಲ್ಕನೇ ಹಂತದ ಎರಡನೇ ಘಟ್ಟವನ್ನು ತೆಗೆದುಕೊಂಡು ಕೆಲಸ ಕಾರ್ಯಗಳನ್ನು ಮಾಡಿ ಇದರಿಂದ ನೀರನ್ನು ಕೊಡಬೇಕೆಂದು ಒಂದು ಪರಿಸ್ಥಿತಿಯಲ್ಲಿ ಪ್ರಸ್ತಾಪ ತಂದಾಗ ತಾವುಗಳು ತಮ್ಮದೇ ಆದಂಥ ವೈಶಿಷ್ಟ್ಯಪೂರ್ಣ ಮಾತುಗಳನ್ನು ಆಡಿದ್ದೀರಿ. ಒಂದು ಮಾತು ಸತ್ಯ. ಬೆಂಗಳೂರು ನಗರಕ್ಕೆ ಕಾವೇರಿ 4ನೇ ಹಂತದ ಮೊದಲನೇ ಘಟ್ಟವನ್ನು ಮಾಡುವುದರಿಂದ ಈ ಕಾರ್ಯವನ್ನು ಎರಡನೆಯದನ್ನು ಕೂಡ ನಾವು ಮಾಡದೇ ಹೋದರೆ, ನಾವು ಸಫಲತೆಯನ್ನು ಕಾಣಲು ಆಗುವುದಿಲ್ಲ. ಬೆಂಗಳೂರು ನಗರದ ಜನರಿಗೆ ಕನಿಷ್ಟ 130 ಲೀಟರ್‌ಗಳಷ್ಟು ನೀರನ್ನಾದರೂ ನಾವು ಕೊಡತಕ್ಕಂಥಾದ್ದಕ್ಕೆ ಅಸಮರ್ಥರಾಗುತ್ತೇವೆಯೋ ಏನೋ ಎಂಬ ದೃಷ್ಟಿಕೋನವನ್ನು ನಮ್ಮ ಮುಂದಿಟ್ಟುಕೊಂಡು ಈ ಕೆಲಸವನ್ನು ನಾವು ಮಾಡಿದ್ದೇವೆ. ಇದರಲ್ಲಿ ತಾಂತ್ರಿಕ ತೊಂದರೆಗಳೇನಾದರೂ ಇದ್ದಲ್ಲಿ ಅದನ್ನು ತಾವುಗಳು ಹೇಳಿ ಸಲಹೆ ಕೊಟ್ಟರೆ ಅವುಗಳನ್ನು ನಾವು ಖಂಡಿತವಾಗಿಯೂ ಪಡೆದುಕೊಳ್ಳುತ್ತೇವೆ. ಇನ್ನು ಟೆಂಡರ್ ವಿಚಾರದಲ್ಲಿರತಕ್ಕಂಥ ವಿವರಗಳು ಆ ವಿಷಯದಲ್ಲಿ ತಜ್ಞರು ಏನಿದ್ದಾರೆ ಅವರುಗಳು ಮಾಡಿರತಕ್ಕಂಥಾದ್ದು. ಅದಕ್ಕಾಗಿ ಅಂಥ ತಜ್ಞರನ್ನು ಆ ಕೆಲಸಕ್ಕಾಗಿ ನೇಮಕ ಮಾಡಿರತಕ್ಕಂಥದ್ದು ಇದೆ. ಆ ತಜ್ಞರ ಸಲಹೆಗಳನ್ನು ಮಾತ್ರ ನಾವು

ತೆಗೆದುಕೊಂಡಿರತಕ್ಕಂಥಾದ್ದು ಇದೆ. ಯಾರೋ ಒಬ್ಬರಿಗೋಸ್ಕರವಾಗಿ . . . ಎಂದು ಹೇಳಿದ್ದೀರಿ. ಹೀಗೆ ಯಾರೋ ಒಬ್ಬರಿಗೋಸ್ಕರವಾಗಿ ಸರಕಾರವನ್ನು ನಡೆಸತಕ್ಕಂಥ ಜಾಯಮಾನ ನಾಲ್ಕು ವರ್ಷ, ಮೂರು ತಿಂಗಳುಗಳಲ್ಲಿ ನಾವು ಎಂದೂ ಮಾಡಿಲ್ಲ. ನಾವು ಹಾಗೆ ಮಾಡಲು ತಯಾರಾಗಿಲ್ಲ. ಇವೊತ್ತೂ ಕೂಡ ನಮ್ಮ ಜನಸಂಖ್ಯೆಗೆ ನಾವು ತರುತ್ತಿರತಕ್ಕಂಥ ನೀರು ಸಾಕಾಗುವುದಿಲ್ಲ. ಆದ್ದರಿಂದ ದಯಮಾಡಿ ಇದರಲ್ಲಿ ಅಂಕಿ-ಸಂಖ್ಯೆಗಳಾಗಲೀ, ಮತ್ತಿತರ ವಿಚಾರಗಳಲ್ಲಿ ಲೋಪ ದೋಷಗಳಿದ್ದರೆ ಗಮನಕ್ಕೆ ತಂದು ಸಲಹೆಗಳನ್ನು ಕೊಡಿ. ಕಾವೇರಿ 4ನೇ ಹಂತದ 2ನೇ ಘಟ್ಟವನ್ನು ಮುಗಿಸದೇ ಹೋದರೆ, ಬೆಂಗಳೂರು ನಗರಕ್ಕೆ ನಾವು ಎಲ್ಲಿಯೋ ಒಂದು ಕಡೆ ತೊಂದರೆ ಮಾಡುತ್ತಿದ್ದೇವೆ ಎಂಬ ಭಾವನೆಯು ಬರುತ್ತದೆ. ಹೀಗೆ ವಿಸ್ತಾರವಾಗಿ ಬೆಳೆಯುತ್ತಾ ಇರತಕ್ಕ ನಗರಕ್ಕೆ ಒಂದು ರೂಪವನ್ನು ಕೊಟ್ಟು ಪ್ರತಿಯೊಬ್ಬರಿಗೂ ನೀರು ಕೊಡತಕ್ಕಂಥ ವ್ಯವಸ್ಥೆಗೆ ಈ ಸರಕಾರವು ಬದ್ಧವಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಾವು ಎತ್ತಿದ ವಿಚಾರಗಳಿಗೆ ಅವರು ಯಾವ ಉತ್ತರವನ್ನೂ ಕೊಟ್ಟಿಲ್ಲ. ಅವರು ಇದನ್ನು ಡಿಮ್ಯಾಂಡ್ ಎಂದು ತಿಳಿದುಕೊಂಡು ಮಾತನಾಡಿದ್ದಾರೆ. ಏನೇನು ಮಾಡಿದ್ದೇವೆ, ಬೆಂಗಳೂರು ನಗರಕ್ಕೆ ಎಷ್ಟು ನೀರು ಬೇಕು, ಮುಂತಾಗಿ ಹೇಳಿದ್ದಾರೆ. ಅವರು ಕಾರ್ಪೋರೇಟರ್ ಆಗಿದ್ದಾಗಿನಿಂದ ಹಿಡಿದು ಮಿನಿಸ್ಟರ್ ಆಗಿರುವ ತನಕ ಮಾಡಿದ್ದನ್ನು ಹೇಳಿದ್ದಾರೆ. ನಮ್ಮ ಪ್ರಮುಖ ವಿಚಾರ ಅಂದರೆ, ಗ್ಲೋಬಲ್ ಟೆಂಡರ್ ಕಾಲ್‌ಫಾರ್ ಮಾಡುವುದಕ್ಕಿಂತ ಮುಂಚೆ ಇಂಥ ಫರ್ಮ್‌ಗೆ ಕೊಡಬೇಕೆನ್ನುವಂಥ ಕರೆಸ್ಪಾಂಡೆನ್ಸ್ ವಿಚಾರ I will read the G.O. dated 20th June 1997 issued by order and in the name of Governor of Karnataka - T.N. Narasimha Murthy, Under Secretary to Government, Urban Development Department. G.O. UDD 48 MNI 97 dt. 20-6-97.

" Read D.O. Letter No. 78 CHO dated 13.3.97, 27-3-97 and 21-5-97 of the Chairman, Bangalore Water Supply & Sewerage Board, Bangalore.

Preamble :

The Chairman, BWSSB in his letter read above sent a proposal of M/s. Biwater Shellbear(Malaysia) stating that the Cauvery water supply scheme Stage IV phase II and Cauvery water supply scheme Stage V can be combined and the scheme can be offered for private participation bringing abut 500 MLD of water to Bangalore city.

Government as a policy feels that water supply in Bangalore should be privatised to make it more responsive, efficient to the needs of the people and that the BWSSB shall call for global tenders to get competitive responses on good and beneficial terms. Hence the following order.

Order : After careful examination of the above facts, Government are

please to accord sanction for :

(a) Implementation of Cauvery Water Supply scheme for bringing 500 MLD of water to Bangalore.

(b) Implementation of the project through private sector participation on BOOT basis."

ಈ ನಡವಳಿಕೆಗಳಲ್ಲಿ ಇವೆರಡು ಕಂಪನಿಗಳ ಹೆಸರನ್ನು ಮಾತ್ರ ನಮೂದಿಸಲಾಗಿದೆ. ಅದನ್ನೇ ಮನಸಿನಲ್ಲಿಟ್ಟುಕೊಂಡು ಕೆಲಸ ಆಗಲೇ ಶುರುವಾಗಿದೆ. ಅದಕ್ಕೆ ನಾನು ಹೇಳಿದ್ದು - ಈ ಮೂರು ಲೆಟರನ್ನು to help this company the Chairman or the Board has written and not for impartial allotment or impartial calling for the tenders. ಆದ್ದರಿಂದಲೇ ನಾನು ಹೇಳುವುದು ಹೌಸ್‌ಕಮಿಟಿ ರಚನೆ ಮಾಡಿ. 23, 13, 27ರ ಲೆಟರ್‌ಗಳೇನಿವೆ ಎಂಬುದನ್ನು ತಿಳಿಸಿ. ಮಲೇಶಿಯಾದ ಬೈವಾಟರ್ ಕಂಪೆನಿಯವರನ್ನು ಯಾವಾಗ ಅಪ್ರೋಚ್ ಮಾಡಲಾಯಿತು, ಅದರ ರೆಫರೆನ್ಸ್ ಯಾಕೆ ಈ ನಡವಳಿಕೆಯಲ್ಲಿ ಬಂತು ಮತ್ತು ಅವರಿಗೆ ಈ ಕಾಂಟ್ರಾಕ್ಟ್ ಕೊಡಲಿಕ್ಕೆ 350 ಪಾಯಿಂಟ್ಸ್ ಇನ್‌ಹೌಸ್‌ಕಮಿಟಿ ಎಂದು ಮಾಡಿ ಏತಕ್ಕೆ ಅಲಾಟ್ ಮಾಡಿದಿರಿ ? ಮೊದಲು ಸಾವಿರ ಪಾಯಿಂಟ್ಸ್ ಅದಕ್ಕೆ ಕೊಟ್ಟು ಆಮೇಲೆ 350 ಪಾಯಿಂಟ್ಸನ್ನು ವಿಥ್‌ಡ್ರಾ ಮಾಡಿಕೊಂಡು ನಿಮಗೆ ಬೇಕಾದವರಿಗೆ ಹೆಚ್ಚಿನ ಪಾಯಿಂಟ್ಸನ್ನು ಇದೇ ಅಧ್ಯಕ್ಷರು ಕೊಡತಕ್ಕಂತಹ ಅವಶ್ಯಕತೆ ಏನು ಬಂತು ? ಇದೆಲ್ಲಾ ಕೂಲಂಕಷವಾಗಿ ಚರ್ಚೆಯಾಗಲಿ. ಏತಕ್ಕೆಂದರೆ ಟ್ರಾನ್ಸ್‌ಫರೆನ್ಸಿ ಇರಬೇಕು ಎಂದು ನೀವು ಹೇಳುತ್ತಿರುತ್ತೀರಿ. - ನೀವಂತೂ ಕೊಟ್ಟಿಲ್ಲ ಅಂತೀರಿ, ಹಾಗಾದರೆ ಒಂದು ಸದನ ಸಮಿತಿ ಮಾಡಿ ಅದರ ಮುಂದೆ ಇದೆಲ್ಲಾ ಪತ್ರಗಳು, ವ್ಯವಹಾರಗಳು, 1997 ರಿಂದ, ಯಾವ್ಯಾವ ಮಂತ್ರಿಗಳು ಬಂದಿದ್ದಾರೆ, ಅವರು ಹೇಳಿದಂತೆ ಮಂತ್ರಿಗಳು ಕಮೀಶನ್ ತೆಗೆದುಕೊಂಡರೆ ರೂಲ್ಸ್ ಪ್ರಕಾರ ಅದು ಬ್ರೈಬರಿ ಅಲ್ಲವಂತೆ, ಅದನ್ನೆಲ್ಲಾ ನೋಡೋಣ, ಏನಾಗಿದೆ ಏನಿಲ್ಲ, ಮಂತ್ರಿಗಳಿಗೇನು ಇಂಟರೆಸ್ಟ್, ನಮ್ಮ ಜನಗಳೇ ಹೋಗಿ ಅವರ ಮನವೊಲಿಸಿದರೋ ಅಥವಾ ಅವರು ಬಂದು ಇವರ ಮನವೊಲಿಸುವ ಕೆಲಸ ಮಾಡಿದರೋ, ಎಂಬುದನ್ನು ತಿಳಿದುಕೊಳ್ಳಲು ಹೌಸ್‌ಕಮಿಟಿ ಮಾಡಿರಿ, ಆಗ ಸ್ವಚ್ಛವಾಗಿ ಗೊತ್ತಾಗುತ್ತದೆ. ಅಧ್ಯಕ್ಷರೇ, ತಾವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು.

MR. SPEAKER : We had reached an agreement. The leader was supposed to come and reply to the debate on Governor's Address. 11-30ಕ್ಕೆ ಮುಗಿಸೋಣ ಎಂದು ಅಂದುಕೊಂಡಿದ್ದೆವು. It is already 12 O' clock and the matter is getting dragged, ಹೇಗೆ ಮಾಡುವುದು ? We must find an end to it.

ಶ್ರೀ ಎಸ್. ಸುರೇಶ್‌ಕುಮಾರ್ : ನಾನು ಐದು ನಿಮಿಷಕ್ಕಿಂತ ಹೆಚ್ಚು ತೆಗೆದುಕೊಳ್ಳುವುದಿಲ್ಲ ಎಂದು ಸಚಿವರು ಹೇಳಿದರು, ಬೈವಾಟರ್ ಬಹಳ ದೊಡ್ಡ ಸಂಸ್ಥೆ. ನಾನು ಇಂಟರ್‌ನೆಟ್ ಮೂಲಕ ಬೈವಾಟರ್ ಬಗ್ಗೆ ತಂದಿದ್ದೇನೆ, ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. According to a leaflet, the perfect water company published by Biwater itself, "Biwater has

achieved its position as one of the world's largest managers and operators of water supply and sewerage system. It has the dedicated commitment to accountable ethical professionalism". But what is the actual position ? This is very misleading. "It is untrue to say that or imply that Biwater is one of the world's largest operators of water and sewerage system. Biwater, on the contrary, is a smallest of all internationally active water operator, whatever be the basis of comparison. There are a number of international companies which operate privatised water concession around the world. They are headed by the large multinationals followed by four of the large British Water and Sewerage companies and Spanish. Biwater business as an operator of water and sewerage system is tiny compared with all these companies." A table has been given according to which a France Company is supplying to a population of 6.50 crore. Another France company is also catering to the needs of 6.50 crore population, and one more company for a population of 2.70 crore. James Water, UK - 2 crore ; Southern Trend UK 1.51 crore ; United Utility UK 75 lakhs, A Spain Company - 46 lakhs, Hyder, UK 42 lakhs and our great Biwater UK 15 lakhs. The companies turnover is just 1/3rd of the smallest company.

Sri J.H. Patel : On every point, I will reply later.

ಅಧ್ಯಕ್ಷರು : ಆಗಲೇ ಹನ್ನೊಂದೂವರೆಗೆ ಅವರು ಉತ್ತರ ಶುರುಮಾಡಬೇಕಾಗಿತ್ತು.

It is already 12. ನೀವೇ ಒಪ್ಪಿಕೊಂಡಿದ್ದಲ್ಲವೇ ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಒಪ್ಪಿಕೊಂಡಿದ್ದರ ಅರ್ಥವೇನು ? ನಮ್ಮ ಮುಂದಿರುವ ಚರ್ಚೆಯ ಮಹತ್ವ ಬೇಡ ಅಂದರೆ ಹೇಗೆ ?

ಶ್ರೀ ಜೆ. ಎಚ್. ಪಟೇಲ್ : ಅವರು ಹೇಳಿದರು ಎಂದು ಗೌರವಕೊಟ್ಟು ನಾನು ಆಗಲೇ ಉತ್ತರ ಶುರು ಮಾಡಿದ್ದೆ, ಅವರು ಇದನ್ನೂ ಸೇರಿಸಿ ಉತ್ತರ ಕೊಡಿರಿ ಎಂದು ಹೇಳಿದ್ದಕ್ಕೆ ನಾನು ನಿಲ್ಲಿಸಿದ್ದೆ.

ಅಧ್ಯಕ್ಷರು : ಖರ್ಗೆಯವರೇ, ಅದೇ ವಿವರಣೆಗಳನ್ನು ಇವರಿಂದಲೇ ಆಮೇಲೆ ಕೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವರೇ ಹೇಳುತ್ತಿದ್ದರೆ ಅಡ್ಡಿ ಇರಲಿಲ್ಲ. ಆದರೆ ಸಂಬಂಧಪಟ್ಟ ಸಚಿವರು ಉತ್ತರ ಕೊಟ್ಟಿದ್ದರಿಂದ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಅದಾದಮೇಲೆ ಫೈನಲ್ ಆಗಿ ಇವರು ಉತ್ತರಿಸಲಿ ಬೇಡ ಎಂದು ಯಾರೂ ಹೇಳುವುದಿಲ್ಲ.

ಶ್ರೀ ಜೆ. ಎಚ್. ಪಟೇಲ್ : ಅವರು ಹೇಳಿದ್ದರ ಬಗ್ಗೆಯೂ ನಾನೇ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಸೋಮಣ್ಣನವರು ಹೇಳಿದ ಮೇಲೆ ನಿಮಗಿರುವ ಡೌಟ್ಸನ್ನು ಒಂದು ಕಡೆ ಮಾರ್ಕ್

ಮಾಡಿಕೊಳ್ಳಿ, ಮುಖ್ಯಮಂತ್ರಿಗಳು ಹೇಳುವುದಕ್ಕೂ ಸಚಿವರು ಹೇಳಿದ್ದಕ್ಕೂ ಏನಾದರೂ ವ್ಯತ್ಯಾಸ ಇದೆಯಾ ಎಂದು ನೋಡಿಕೊಳ್ಳಿ. For all matters you can seek clarification. After all, he is the highest authority in the government.

Sri M.Mallikarjuna Karge : We do agree. The highest authority is going to reply this in the last. But already when he was allowed the concerned minister to speak out on this issue, naturally, ಬೇರೆಯವರೂ ಕೇಳುತ್ತಾರೆ, ಉತ್ತರ ಕೊಡಲಿ.

ಅಧ್ಯಕ್ಷರು : ದಯಮಾಡಿ ಅರ್ಥಮಾಡಿಕೊಳ್ಳಿ. ಮುಖ್ಯಮಂತ್ರಿಗಳು ಉತ್ತರ ಕೊಡುವ ವೇಳೆಗೆ ಅದನ್ನು ಸೇರಿಸಿ ಹೇಳಲಿ. ಸೋಮಣ್ಣನವರು ಹೇಳಿರತಕ್ಕಂಥದ್ದು ಮುಖ್ಯಮಂತ್ರಿಗಳು ಹೇಳಬಹುದಾದಂಥದ್ದು ಅದರ, ಇದರ ಮಧ್ಯೆ ಇರುವ ವ್ಯತ್ಯಾಸ ಹೊಸವು ಎಲ್ಲವನ್ನೂ ಕೇಳಿ ಅವರು ಹೇಳುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್ : ಅದರ ಬಗ್ಗೆ ನನಗೆ ಸಾಕಷ್ಟು ಡಾಕ್ಯುಮೆಂಟ್ಸ್ ಇದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಎಲ್ಲಾ ಜನರಲ್ ಸಬ್ಜೆಕ್ಟ್‌ಮೇಲೆ ಹೇಳಿ ಕೊನೆಗೆ ಅದನ್ನು ಹೇಳುತ್ತಾರೆ. ಅದಕ್ಕಾಗಿ ಏನಾಗುತ್ತದೆ ಅಂದರೆ ನಮ್ಮ ಚರ್ಚೆಗೆ ಅಷ್ಟೊಂದು ಸಮರ್ಪಕವಾಗಿ ರಿಪ್ಲೈ ಬರುವುದಿಲ್ಲ.

ಅಧ್ಯಕ್ಷರು : ನನಗೆ ಪರ್ಸನಲಿ ಏನು ಅನಿಸುತ್ತದೆ we will be unfair to the Leader ಎಂದು ಅವರು ಮೂರು ಸಲ ಪ್ರಿಪೇರ್ ಆಗಿ ಬಂದಾಗಲೂ ನಾವು ಪೋಸ್ಟ್‌ಪೋನ್ ಮಾಡಿ ಇಂಥ ದಿವಸ ನೀವು ಉತ್ತರ ಕೊಡಿ ಎಂದು ಅವರಿಗೆ ಹೇಳಿದ್ದೇವೆ. ಇವತ್ತು ಅವರಿಗೆ ನಾವು ಟೈಮ್ ಕೊಟ್ಟು ನೀವು ಹತ್ತು ಗಂಟೆಗೆ ರಿಪ್ಲೈ ಮಾಡಿ ಎಂದು ಹೇಳಿ ಹತ್ತೂವರೆ ಗಂಟೆವರೆಗೂ ಕುಳಿತುಕೊಂಡು ಮತ್ತೆ ನಾನು ಅವರನ್ನು ನೀವು ಕುಳಿತುಕೊಳ್ಳಿ ಅವರು ಕ್ಲಾರಿಫಿಕೇಷನ್ ಕೇಳಲಿ ಎಂದು ಹೇಳುವುದಕ್ಕಾಗುತ್ತದೆಯೇ ?

I think I will not be doing a fair thing.

Sri Mallikarjuna Karge : Sir, you have done enough justice to him and opposition also. Several times ಮುಖ್ಯಮಂತ್ರಿಗಳು ಇಲ್ಲ ಎಂದು ಹೇಳಿ ಪೋಸ್ಟ್‌ಪೋನ್ ಮಾಡಿದ್ದು ಉಂಟು. ಅದಕ್ಕೇನು ಬೆಲೆ ಇಲ್ಲವೇ ?

MR. SPEAKER : That is also true. ನಾನು ಇಲ್ಲ ಎಂದು ಹೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದಕ್ಕೆ ಒಂದೆರಡು ಕ್ಲಾರಿಫಿಕೇಷನ್ ಇವೆ, ಅವು ಆದಮೇಲೆ ನೀವು ಬೇಕಾದರೆ ಕೊನೇ ಹೇಳಿ.

ಶ್ರೀ ಜೆ. ಹೆಚ್. ಪಟೇಲ್ : ಅವಕ್ಕೂ ನಾನೇ ಉತ್ತರ ಕೊಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವೇ ಕೊಡಿ, ಬೇಡ ಎನ್ನುವುದಿಲ್ಲ.

ಅಧ್ಯಕ್ಷರು : ಅದು ಏಕೆ ದೊಡ್ಡ ಪ್ರತಿಷ್ಠೆ ಪ್ರಶ್ನೆಯಾಗಬೇಕು? ಅವರು ಉತ್ತರ ಹೇಳಲಿ ಯಾವುದಾದರೂ ಬಾಕಿ ಇರುವುದನ್ನೂ ಸೇರಿಸಿ ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : 5 ನಿಮಿಷ ನೀವು ಕೇಳಿ.

ಅಧ್ಯಕ್ಷರು : ಇದರಲ್ಲಿಯೇ ಸುಮಾರು 10-15 ನಿಮಿಷ ಹೋಯಿತು.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಈಗ ಬೈವಾಟರ್‌ದ್ದು, ಅದರ ಸಂಪೂರ್ಣ ಇತಿಹಾಸ ಅದು ಹೇಗೆ ಬಂತು, ಏನಾಯಿತು ಎಂಬುದನ್ನು ಹೇಳುತ್ತೇನೆ. ಮಾನ್ಯ ಸೋಮಣ್ಣನವರು ಏನು ಹೇಳಿದರು, ಅದಕ್ಕಿಂತ ಹೆಚ್ಚು ಹೇಳುತ್ತೇನೆ. ಇದರ ಬಗ್ಗೆ ನನಗೆ ಇರುವಷ್ಟು ಮಾಹಿತಿ ಬಹುಶಃ ಅವರಿಗೆ ಇರಲಿಕ್ಕಿಲ್ಲ ; ಆದರೆ ಈಗ ನಾವು ಯಾವ ಉದ್ದೇಶ ಪ್ರಾರಂಭ ಮಾಡಿದ್ದೇವೋ, ಅದನ್ನು ಬಿಟ್ಟು ಬಿಟ್ಟು ಬೈವಾಟರ್ ಎಂದರೆ ಹೇಗೆ ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ರೂಲ್ 69ರ ಕೆಳಗೆ ಆ ಸಬ್ಜೆಕ್ಟ್ ಇದೆ. ಅದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಮಾಡಿದ್ದು. ಯಾವ ಸಬ್ಜೆಕ್ಟ್ ಎಂದು ಅಲ್ಲ.

ಶ್ರೀ ಜೆ. ಹೆಚ್. ಪಟೇಲ್ : ತಾವೇ ಹೇಳಿದಿರಿ, ಉತ್ತರ ಕೊಡುವಾಗ ನೀವು ಎರಡು ಸೇರಿಸಿ ಕೊಡಿ ಎಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಇಲ್ಲ ಎಂದು ಹೇಳಿ ಅದನ್ನು ಗೌಣ ಎಂದು ತಿಳಿದುಕೊಳ್ಳುತ್ತೀರಾ ?

ಅಧ್ಯಕ್ಷರು : ಈಗ ಮಾನ್ಯ ಸದಸ್ಯರುಗಳು ಬೈವಾಟರ್ ಮೇಲೆ ಮಾಡಿದ ಚರ್ಚೆಗೆ ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದಿಂದ ಅವರಿಗೆ ತೃಪ್ತಿಯಾಗಿಲ್ಲ. ಇನ್ನೂ ಕೆಲವು ಸ್ಪಷ್ಟೀಕರಣ ಕೇಳುವ ಒಂದು ಆತುರದಲ್ಲಿದ್ದಾರೆ. ಆ ಹಕ್ಕೂ ಕೂಡ ಅವರಿಗೆ ಇದೆ. ತಮಗೆ ನಾವು ಮಾತುಕೊಟ್ಟಂತೆ ಈಗ ತಾವು ಉತ್ತರವನ್ನು ಪ್ರಾರಂಭ ಮಾಡಿ. ಅನಂತರ ತಾವು ಕೊಡುವ ಉತ್ತರ ಅವರಿಗೆ ಸರಿಹೋಗಲಿಲ್ಲ ಎಂದರೆ ಅವರು ಕೊಡುವುದೋ ತಾವು ಕೊಡುವುದೋ ಆಗುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ರೂಲ್ 69ರಲ್ಲಿ ಒಂದನ್ನು ತೆಗೆದುಕೊಂಡು ನಮ್ಮದನ್ನು ಬಿಟ್ಟಿದ್ದೀರಿ. ನಾನು ಕಳುಹಿಸಿ ಮೂರು ದಿವಸವಾಯಿತು.

ಅಧ್ಯಕ್ಷರು : ಅದು ರೂಲ್ 69 ಅಲ್ಲ. ಅರ್ಧ ಗಂಟೆ ಚರ್ಚೆ ಇರಲಿ. ಅಪರೂಪಕ್ಕೆ ಅಸೆಂಬ್ಲಿಗೆ ಬರುತ್ತೀರಿ. ಕೂತಿರಿ ಮಾತನಾಡೋಣ. ನಮಗೆ ಖುಷಿ ಅಲ್ಲವೇ ನೀವು ಹೌಸ್‌ನಲ್ಲಿದ್ದರೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನನಗೆ ಐದು ನಿಮಿಷ ಕೊಟ್ಟರೆ ಹೇಳಿಬಿಡುತ್ತೇನೆ. ಕಿಡ್ನ್ಯಾಪ್ ಮಾಡಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ಸದಸ್ಯರುಗಳು ಹೇಳಿರುವುದಕ್ಕೆ ಉತ್ತರ ಕೊಟ್ಟ ಮೇಲೆ ನೀವು ಆಮೇಲೆ ನಿಮ್ಮದು ಏನಿದ್ದರೂ ಕೇಳಿ.

ಅಧ್ಯಕ್ಷರು : ನಿಮ್ಮದು 69 ರೂಲ್‌ನಲ್ಲಿ ಇಲ್ಲ. ನಿಮ್ಮದು ಅರ್ಧಗಂಟೆ ಚರ್ಚೆಯಲ್ಲಿ ಬರುತ್ತದೆ. ಆಮೇಲೆ ತೆಗೆದುಕೊಳ್ಳುತ್ತೇನೆ. ಮುಖ್ಯಮಂತ್ರಿಗಳ ಉತ್ತರವಾಗಲಿ, ಉತ್ತರವಾದ ಮೇಲೆ ಇವತ್ತು ಯಾರ‍್ಯಾರು ಮೆಂಬರ್ಸ್ ನೋಟೀಸ್‌ಗಳನ್ನು ಕೊಟ್ಟಿದ್ದೀರಿ, ಯಾವ ವಿಚಾರಗಳು ಪ್ರಸ್ತಾಪವಾಗುವುದಕ್ಕೆ ಅವಕಾಶ ಇಲ್ಲ, ಅವೆಲ್ಲವನ್ನೂ ಪೂರ್ಣಮಾಡಿ ಕಳುಹಿಸಿಕೊಡುತ್ತೇನೆ. ಈಗ ಸನ್ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಉತ್ತರ ಪ್ರಾರಂಭಿಸುತ್ತಿದ್ದಾರೆ.

2. ಮಾನ್ಯ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲಿನ ಚರ್ಚೆಗೆ ಮುಖ್ಯಮಂತ್ರಿಗಳಿಂದ ಉತ್ತರ.

+ **ಶ್ರೀ ಜೆ. ಹೆಚ್. ಪಟೇಲ್** (ಮುಖ್ಯ ಮಂತ್ರಿಗಳು) **:** ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಮಾನ್ಯ ವಿರೋಧ ಪಕ್ಷದ ನಾಯಕರು ಹಲವಾರು ಮುಖಂಡರು ಅವರದೇ ಆದ ವ್ಯಾಖ್ಯಾನವನ್ನು ಮಾಡಿದ್ದಾರೆ. ಇದು ಚುನಾವಣಾ ಭಾಷಣ ಎಂದು ಕೆಲವರು ಹೇಳಿದರು, ಸರ್ಕಾರ ಯಥಾಪ್ರಕಾರ ವರ್ಷ ಏನು ಹೇಳುತ್ತದೋ ಸುಮ್ಮನೆ ಅವರು ಓದಿ ಹೋಗಿಬಿಟ್ಟರು ಎಂದು. ಈ ಬ್ರಿಟಿಷ್ ಪಾರ್ಲಿಮೆಂಟರಿ ಸಿಸ್ಟಂನ್ನು ನಾವು ಅಡಾಫ್ಟ್ ಮಾಡಿಕೊಂಡಿದ್ದೇವೆ. ಆ ಪ್ರಕಾರ ನಡೆದುಕೊಂಡು ಹೋಗುತ್ತೇವೆ. ಇನ್ನು ಎಲ್ಲಿಯವರೆಗೂ ಅಲ್ಲಿ ಪ್ರೆಸಿಡೆಂಟ್ ಅಡ್ರೆಸ್ ಮಾಡುವುದಾಗಲಿ, ರಾಜ್ಯಪಾಲರು ಅಡ್ರೆಸ್ ಮಾಡುವುದಾಗಲಿ ಬದಲಾವಣೆ ಆಗಿಲ್ಲ. ರಾಜ್ಯಪಾಲರೇನು ಅವರಿಗಷ್ಟೇ ಅವರೇ ಕುಳಿತುಕೊಂಡು ಬರೆಯುತ್ತಾರೆಯೇ ? ರಾಜ್ಯಪಾಲರಿಗೆ ಏನೇನು ಸರ್ಕಾರ ಮಾಡಿದೆ, ಮಾಡಬೇಕು ಎಂದು ವಿಚಾರ ಇದೆ ಎನ್ನುವುದನ್ನು ನಾವು ಹೇಳಿದ್ದನ್ನು ಅವರು ಓದುತ್ತಾರೆ. ರಾಜ್ಯಪಾಲರ ಭಾಷಣ ಒಂದು ವಿಚಾರ. ನಮ್ಮ ಬಜೆಟ್ ಇದೆಯಲ್ಲಾ, ಅದು ಆಚಾರ. That is the spirit of what the Government is going to do. ಅದನ್ನೇ ರಾಜ್ಯಪಾಲರ ಭಾಷಣದಲ್ಲಿ ಹೇಳುತ್ತೇವೆ. ಹೇಳುವಾಗ ನಾವು ಯಾವುದನ್ನು ಮಾಡಿದ್ದೇವೆ ಯಾವುದನ್ನು ಮಾಡಬೇಕು ಎಂದು ಇದ್ದೇವೆ, ಅದನ್ನು ಹಲವಾರು ಇಲಾಖೆಗಳ ಮೂಲಕ ಹೇಳುತ್ತೇವೆ. Governor's Address is idea. Budget is concrete.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಹೇಳಿದಂತೆ ಅದು ಆಚಾರ, ಅದು ವಿಚಾರ ನಿಮ್ಮದು ಪ್ರಚಾರ.

ಶ್ರೀ ಜೆ. ಹೆಚ್. ಪಟೇಲ್ : ರಾಜಕಾರಣದಲ್ಲಿರುವುದೇ ಅದಕ್ಕೋಸ್ಕರ. ಅದೇನೇ ಇರಲಿ. ರಾಜ್ಯಪಾಲರ ಭಾಷಣದಲ್ಲಿ ಕೆಲವು ಟೀಕೆಗಳು ಬಂದಿವೆ. ಕೆಲವು ಅಪ್ರಿಸಿಯೇಷನ್ ಬಂದಿದೆ. ನಾನು ಇಲ್ಲಿ ಪ್ರಾರಂಭ ಮಾಡುವುದು ನಮ್ಮ ಸರ್ಕಾರ ಬಂದ ಮೇಲೆ ಏನು ಇನಿಸಿಯೇಷನನ್ನು ನಾವು ತೆಗೆದುಕೊಂಡಿದ್ದೇವೆ, ಕೃಷ್ಣಾ ನದಿ ನೀರಿನ ಪೂರ್ಣ ಪಾಲನ್ನು ಬಳಸಿಕೊಳ್ಳುವುದಕ್ಕೆ ಕರ್ನಾಟಕ ರಾಜ್ಯಕ್ಕೆ ಇರುವ ಸಂದರ್ಭದಲ್ಲಿ ಸಾಧ್ಯವಿಲ್ಲ ಎಂದು ಹೇಳಿದ್ದರು. ಎರಡು ಸಾವಿರ ಇಸವಿಯೊಳಗೆ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಏನು ಹೇಳಿದ್ದರು, ಆ ಸಂಶಯವನ್ನು ನಿವಾರಣೆ ಮಾಡಿದ್ದೇವೆ. ನಾವು ಇವತ್ತು ಕೋರ್ಟಿನ ತೀರ್ಪಿನ ನಿರೀಕ್ಷೆಯಲ್ಲಿದ್ದೇವೆ. ಅದಾದ ತಕ್ಷಣ